**Q.31** ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಿ ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಿ.

ಪ್ರಶ್ನೆ:
W, O, K, G ಮತ್ತು Y ಎಂಬ 5 ಕಂಬಗಳು ವಿಭಿನ್ನ ಎತ್ತರಗಳನ್ನು ಹೊಂದಿದ್ದು, ಯಾವ ಕಂಬವು ಅತ್ಯಂತ ಚಿಕ್ಕದಾಗಿದೆ?

ಹೇಳಿಕೆಗಳು:
I. G ಕಂಬವು ಒಂದು ಕಂಬಕ್ಕಿಂತ ಮಾತ್ರ ಎತ್ತರವಾಗಿದೆ. W ಕಂಬವು O ಗಿಂತ ಎತ್ತರವಾಗಿದೆ.
II. G ಕಂಬವು Y ಗಿಂತ ಎತ್ತರವಾಗಿದೆ.

**Ans**
✗ A. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ
✓ B. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು II ಎರಡರ ಒಟ್ಟು ಮಾಹಿತಿಯು (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಸಾಕಾಗುತ್ತವೆ
✗ C. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ಮತ್ತು ಹೇಳಿಕೆ II ರ ಒಟ್ಟು ಮಾಹಿತಿ ಎರಡೂ ಸಾಕಾಗುವುದಿಲ್ಲ
✗ D. ಈ ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯು ಮಾತ್ರ ಸಾಕಾಗುತ್ತದೆ, ಆದರೆ ಹೇಳಿಕೆ II ರಲ್ಲಿರುವ ಮಾಹಿತಿಯು ಸಾಕಾಗುವುದಿಲ್ಲ

**Q.32** M, N, O, P, Q, R ಮತ್ತು S ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವು ಇದೇ ಕ್ರಮದಲ್ಲಿ ಇರಬೇಕೆಂದಿಲ್ಲ. Q ಪೆಟ್ಟಿಗೆಯನ್ನು ಮಾತ್ರ O ಪೆಟ್ಟಿಗೆಯ ಮೇಲೆ ಇಡಲಾಗಿದೆ. S ಪೆಟ್ಟಿಗೆಯನ್ನು ಮಾತ್ರ O ಮತ್ತು P ಪೆಟ್ಟಿಗೆಗಳ ನಡುವೆ ಇಡಲಾಗಿದೆ. M ಪೆಟ್ಟಿಗೆಯನ್ನು ಮಾತ್ರ R ಗಿಂತ ಕೆಳಗೆ ಇಡಲಾಗಿದೆ. ಹಾಗಾದರೆ N ಮತ್ತು M ಪೆಟ್ಟಿಗೆಗಳ ನಡುವೆ ಎಷ್ಟು ಪೆಟ್ಟಿಗೆಗಳನ್ನು ಇಡಲಾಗಿದೆ?

**Ans**
✗ A. ಮೂರು
✗ B. ಎರಡು
✓ C. ಒಂದು
✗ D. ನಾಲ್ಕು

Blackbook
Get India's No 1 Vocab Preparation App for FREE : Blackbook : English Vocabulary
GET IT ON Google Play

Q.33 ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ, 21 ಎಂಬುದು 64 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ, 24 ಎಂಬುದು 73 ಕ್ಕೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿದಾಗ, 34 ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಡೆಸಬೇಕು. ಉದಾ. ಸಂಖ್ಯೆ 13 ಅನ್ನು 13 ಎಂದು ತೆಗೆದುಕೊಂಡು ಅದರ ಮೇಲೆ ಸಂಕಲನ/ವ್ಯವಕಲನ/ಗುಣಾಕಾರ ಮುಂತಾದ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಆಗಿ ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans
- ✔ A. 103
- ✘ B. 92
- ✘ C. 123
- ✘ D. 112

Q.34 PLUMBER ಎಂಬ ಪದದಲ್ಲಿನ ಪ್ರತಿಯೊಂದು ಸ್ವರಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ತಕ್ಷಣದ ನಂತರದ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ ಮತ್ತು ಪ್ರತಿ ವ್ಯಂಜನಾಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಕ್ರಮದಲ್ಲಿ ಬರುವ ಅದರ ತಕ್ಷಣದ ಹಿಂದಿನ ಅಕ್ಷರದೊಂದಿಗೆ ಬದಲಾಯಿಸಲಾಗುತ್ತದೆ. ಹೀಗೆ ರೂಪುಗೊಂಡ ಅಕ್ಷರಗಳ ಗುಂಪಿನಲ್ಲಿ ಎಷ್ಟು ಸ್ವರಾಕ್ಷರಗಳಿರುತ್ತವೆ?

Ans
- ✘ A. 1
- ✔ B. 2
- ✘ C. 0
- ✘ D. 3

Q.35 ಕರಣ್ ಅವರು ನಿಶಾ ಅವರ ಸಹೋದರ. ನಿಶಾ ಅವರು ರಾಕೇಶ್ ಅವರ ಮಗ. ರಾಕೇಶ್ ಅವರು ವಿಕ್ರಮ್ ಅವರ ತಂದೆ. ವಿಕ್ರಮ್ ಅವರು ಪೂಜಾ ಅವರ ಹೆಂಡತಿ. ಹಾಗಾದರೆ, ಕರಣ್ ಅವರು ಪೂಜಾ ಅವರಿಗೆ ಹೇಗೆ ಸಂಬಂಧಿ?
(ಹೆಸರುಗಳು ತಟಸ್ಥ ಲಿಂಗವನ್ನು ಹೊಂದಿವೆ)

Ans
- ✘ A. ತಂದೆ
- ✘ B. ಹೆಂಡತಿಯ ತಂದೆ
- ✘ C. ಸಹೋದರ
- ✔ D. ಹೆಂಡತಿಯ ಸಹೋದರ

Q.36 ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, GJFC ಎಂಬುದು YBXU ಗೆ ಸಂಬಂಧಿಸಿದೆ. ಅದೇ ರೀತಿ, VYUR ಎಂಬುದು NQMJ ಗೆ ಸಂಬಂಧಿಸಿದೆ. ಹಾಗಾದರೆ ಇದೇ ತರ್ಕವನ್ನು ಅನುಸರಿಸಿದಾಗ BEAX ಎಂಬುದು ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

Ans
- ✘ A. TXRZ
- ✘ B. TVRP
- ✔ C. TWSP
- ✘ D. TWRP

Q.37 ವಿಕಾಸ್ ಅವರು A ಬಿಂದುವಿನಿಂದ ಪ್ರಯಾಣ ಆರಂಭಿಸಿ 11 km ಉತ್ತರದೆಡೆಗೆ ಚಲಾಯಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 13 km ಚಲಾಯಿಸುತ್ತಾರೆ. ನಂತರ ಬಲಕ್ಕೆ ತಿರುಗಿ 12 km ಚಲಾಯಿಸುತ್ತಾರೆ. ನಂತರ ಅವರು ಬಲಕ್ಕೆ ತಿರುಗಿ 17 km ಚಲಾಯಿಸುತ್ತಾರೆ. ಅಂತಿಮವಾಗಿ ಅವರು ಬಲಕ್ಕೆ ತಿರುಗಿ 1 km ಚಲಾಯಿಸಿ P ಬಿಂದುವಿನಲ್ಲಿ ನಿಲ್ಲುತ್ತಾರೆ. ಅವರಿ ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನ ಕಡೆಗೆ ಪ್ರಯಾಣಿಸಬೇಕು? (ನಿರ್ದಿಷ್ಟವಾಗಿ ಹೇಳದ ಹೊರತು ಎಲ್ಲಾ ತಿರುವುಗಳು 90-ಡಿಗ್ರಿಗಳ ತಿರುವುಗಳಾಗಿವೆ.)

Ans
- ✘ A. 7 km ಪೂರ್ವಕ್ಕೆ
- ✔ B. 4 km ಪೂರ್ವಕ್ಕೆ
- ✘ C. 7 km ಪಶ್ಚಿಮಕ್ಕೆ
- ✘ D. 4 km ಪಶ್ಚಿಮಕ್ಕೆ

Get India's No 1 Vocab Preparation App for FREE : Blackbook : English Vocabulary
GET IT ON Google Play

Q.38 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'trust the process' ಎಂಬುದನ್ನು 'zb ac tm' ಎಂದು ಸಂಕೇತಿಸಲಾಗಿದೆ ಮತ್ತು 'I trust you' ಎಂಬುದನ್ನು 'jk zb mb ' ಎಂದು ಸಂಕೇತಿಸಲಾಗಿದೆ. ಹಾಗಾದರೆ, ಕೊಟ್ಟಿರುವ ಸಂಕೇತ ಭಾಷೆಯಲ್ಲಿ 'trust ' ಎಂಬುದರ ಸಂಕೇತವೇನು?

Ans
✔ A. zb
✘ B. tm
✘ C. jk
✘ D. mb

Q.39 ಈ ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಕೆಳಗಿನ ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) P E R G T F V N J I O K U Y H K Y T B H R D T V W (ಬಲ)

ತನ್ನ ತಕ್ಷಣದ ಹಿಂದೆ ಸ್ವರಾಕ್ಷರ ಮತ್ತು ತನ್ನ ತಕ್ಷಣದ ಮುಂದೆ ವ್ಯಂಜನಾಕ್ಷರವನ್ನು ಹೊಂದಿರುವಂತಹ ಎಷ್ಟು ವ್ಯಂಜನಾಕ್ಷರಗಳು ಇಲ್ಲಿವೆ?

Ans
✔ A. ಎರಡು
✘ B. ಯಾವುದೂ ಇಲ್ಲ
✘ C. ಮೂರು
✘ D. ಒಂದು

Q.40 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ ಈ ಕೆಳಗೆ ನೀಡಿರುವ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಏನು ಬರಬೇಕು?

LNI MOJ NPK OQL ?

Ans
✘ A. PRN
✘ B. PSN
✘ C. PSM
✔ D. PRM

Q.41 ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನಕ್ಕೆ ಯಾವ ಸಂಖ್ಯೆ ಸರಿಹೊಂದುತ್ತದೆ?

1 8 17 28 41 ?

Ans
✘ A. 52
✔ B. 56
✘ C. 120
✘ D. 80

Q.42 ನೀಡಲಾದ ಸರಣಿಯಲ್ಲಿ (?) ಜಾಗಕ್ಕೆ ಯಾವುದು ಸರಿಹೊಂದುತ್ತದೆ?

5 16 22 33 39 50 56 ?

Ans
✘ A. 64
✘ B. 68
✔ C. 67
✘ D. 62

Q.43 BURDENS ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಜೋಡಿಸಿದರೆ ಎಷ್ಟು ಅಕ್ಷರಗಳ ಸ್ಥಾನ(ಗಳು) ಬದಲಾಗದೆ ಉಳಿಯುತ್ತವೆ?

Ans
✔ A. 1
✘ B. 4
✘ C. 3
✘ D. 2

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

Q.44 ಈ ಕೆಳಗಿನ ಅಕ್ಷರ, ಚಿಹ್ನೆಯ ಸರಣಿಯನ್ನು ಅವಲೋಕಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ.
ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.
(ಎಡ) F & I Y @ J Y C * A # & K S P $ B M (ಬಲ)
ಪ್ರತಿಯೊಂದೂ ತನ್ನ ತಕ್ಷಣದ ಹಿಂದೆ ವ್ಯಂಜನಾಕ್ಷರವನ್ನು ಮತ್ತು ತನ್ನ ತಕ್ಷಣದ ಮುಂದೆ ಚಿಹ್ನೆಯನ್ನು ಹೊಂದಿರುವಂತಹ ಎಷ್ಟು ಚಿಹ್ನೆಗಳು ಇಲ್ಲಿವೆ?

Ans
- ❌ A. ಎರಡು
- ✅ B. ಯಾವುದೂ ಇಲ್ಲ
- ❌ C. ಮೂರು
- ❌ D. ಒಂದು

Q.45 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಬೇಕು ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಬೇಕು.

G, H, I, S ಮತ್ತು W ಎಂಬ ಬೇರೆ ಬೇರೆ ಎತ್ತರಗಳನ್ನು ಹೊಂದಿರುವ 5 ಕಂಬಗಳಲ್ಲಿ, ಯಾವ ಕಂಬವು ಅತ್ಯಂತ ಉದ್ದವಾಗಿದೆ?
(I) G ಕಂಬವು ಕೇವಲ ಎರಡು ಕಂಬಗಳಿಗಿಂತ ಹೆಚ್ಚು ಉದ್ದವಾಗಿದೆ. H ಕಂಬವು W ಗಿಂತ ಉದ್ದವಾಗಿದೆ ಹಾಗೂ ಯಾವುದೇ ಕಂಬವು H ಮತ್ತು W ನಡುವಿನ ಎತ್ತರವನ್ನು ಹೊಂದಿಲ್ಲ.
(II) S ಕಂಬವು W ಗಿಂತ ಉದ್ದವಾಗಿದೆ.

Ans
- ❌ A. I ಮತ್ತು II ಎರಡೂ ಹೇಳಿಕೆಗಳು ಒಟ್ಟಾಗಿ (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತವೆ.
- ✅ B. I ಮತ್ತು II ಎರಡೂ ಹೇಳಿಕೆಗಳಲ್ಲಿರುವ ಒಟ್ಟು ಮಾಹಿತಿಯು ಪ್ರಶ್ನೆಯನ್ನು ಉತ್ತರಿಸಲು **ಸಾಕಾಗುವುದಿಲ್ಲ**
- ❌ C. ಹೇಳಿಕೆ I ರಲ್ಲಿನ ಮಾಹಿತಿಯು ಮಾತ್ರವೇ ಪ್ರಶ್ನೆಯನ್ನು ಉತ್ತರಿಸಲು ಸಾಕಾಗುತ್ತದೆ, ಆದರೆ ಹೇಳಿಕೆ II ಯಲ್ಲಿನ ಮಾಹಿತಿಯು ಸಾಕಾಗುವುದಿಲ್ಲ
- ❌ D. ಹೇಳಿಕೆ II ರಲ್ಲಿನ ಮಾಹಿತಿಯು ಮಾತ್ರವೇ ಪ್ರಶ್ನೆಯನ್ನು ಉತ್ತರಿಸಲು ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿನ ಮಾಹಿತಿಯು ಸಾಕಾಗುವುದಿಲ್ಲ

Q.46 ಒಂದುವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '−' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಸಂಖ್ಯೆ ಬರುತ್ತದೆ?

279 B 52 A 468 C 624 D 438=?

Ans
- ❌ A. 161
- ❌ B. 323
- ✅ C. 217
- ❌ D. 232

Q.47 ಒಂದುವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '−' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಸಂಖ್ಯೆ ಬರುತ್ತದೆ?

17 C 35 A 6 B 18 D 4 = ?

Ans
- ✅ A. 118
- ❌ B. 119
- ❌ C. 117
- ❌ D. 120

Q.48 6238571 ಸಂಖ್ಯೆಯಲ್ಲಿನ ಪ್ರತಿ ಬೆಸ ಅಂಕಿಗೆ 1 ಅನ್ನು ಕೂಡಿಸಿದರೆ ಮತ್ತು ಪ್ರತಿ ಸಮ ಅಂಕಿಯಿಂದ 2 ಅನ್ನು ಕಳೆದರೆ, ರೂಪುಗೊಂಡ ಹೊಸ ಸಂಖ್ಯೆಯಲ್ಲಿ ಎಷ್ಟು ಅಂಕಿಗಳು ಒಂದಕ್ಕಿಂತ ಹೆಚ್ಚು ಬಾರಿ ಕಾಣಿಸಿಕೊಳ್ಳುತ್ತವೆ?

Ans
- ❌ A. 1
- ❌ B. 3
- ❌ C. 0
- ✅ D. 2

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.49** ಕೆಳಗೆ ನೀಡಲಾದ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆಯ್ಕೆ ಮಾಡಿ. ಈ ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

EFG–IJK
BCD–FGH

**Ans**
- ✗ A. JKL–MOO
- ✗ B. JJJ–NOP
- ✓ C. JKL–NOP
- ✗ D. JJJ–MNO

**Q.50** ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'JOIN' ಎಂಬುದನ್ನು '4978' ಎಂದು ಸಂಕೇತಿಸಲಾಗುತ್ತದೆ ಮತ್ತು 'COIN' ಎಂಬುದನ್ನು '2879' ಎಂದು ಸಂಕೇತಿಸಲಾಗುತ್ತದೆ. ಹಾಗಾದರೆ ಕೊಟ್ಟಿರುವ ಭಾಷೆಯಲ್ಲಿ 'C' ಎಂಬುದನ್ನು ಹೇಗೆ ಸಂಕೇತಿಸಲಾಗುತ್ತದೆ?

**Ans**
- ✓ A. 2
- ✗ B. 4
- ✗ C. 9
- ✗ D. 8

Section : **General Science**

**Q.51** ಪರಿಣಾಮಕಾರಿ ರೋಧವು 2 Ω ಆಗುವಂತೆ 3 Ω ಮತ್ತು X Ω ನ ಎರಡು ರೋಧಗಳನ್ನು ಸಮಾಂತರವಾಗಿ ಸಂಪರ್ಕಿಸಲಾಗಿದೆ. ಹಾಗಾದರೆ X ನ (Ω ನಲ್ಲಿ) ಮೌಲ್ಯವೆಷ್ಟು?

**Ans**
- ✗ A. 1/3
- ✓ B. 6
- ✗ C. 1/6
- ✗ D. 3

**Q.52** ಒಂದು ದ್ರಾವಣದಲ್ಲಿರುವ ನಿರ್ದಿಷ್ಟ ಪ್ರಮಾಣದ ದ್ರಾವಕಕ್ಕೆ ಹೆಚ್ಚಿನ ದ್ರಾವ್ಯವನ್ನು ಸೇರಿಸಿದಾಗ ಏನಾಗುತ್ತದೆ?

**Ans**
- ✗ A. ದ್ರಾವ್ಯವನ್ನು ಸೇರಿಸಿದಾಗ ದ್ರಾವಣದ ಸಾರತೆಯು ಬದಲಾಗದೆ ಹಾಗೆಯೇ ಉಳಿಯುತ್ತದೆ
- ✗ B. ಹೆಚ್ಚು ದ್ರಾವ್ಯವನ್ನು ಸೇರಿಸಿದಾಗ ದ್ರಾವಣವು ಸಾರತೆಯು ಕಡಿಮೆಯಾಗುತ್ತದೆ.
- ✗ C. ಹೆಚ್ಚು ದ್ರಾವ್ಯವನ್ನು ಸೇರಿಸಿದಾಗ ದ್ರಾವಣವು ಶುದ್ಧ ದ್ರಾವಕವಾಗಿ ಬದಲಾಗುತ್ತದೆ
- ✓ D. ಹೆಚ್ಚು ದ್ರಾವ್ಯವನ್ನು ಸೇರಿಸಿದಾಗ ದ್ರಾವಣದ ಸಾರತೆಯು ಹೆಚ್ಚಾಗುತ್ತದೆ

**Q.53** ಅರಳಿದ ಸುಣ್ಣದ (slaked lime) ಉಂಟಾಗುವಿಕೆಯು _________ಗೆ ಒಂದು ಉದಾಹರಣೆಯಾಗಿದೆ.

**Ans**
- ✓ A. ಸಂಯೋಗ ಕ್ರಿಯೆ (combination reaction)
- ✗ B. ಸ್ಥಾನಪಲ್ಲಟ ಕ್ರಿಯೆ
- ✗ C. ವಿಘಟನೆ ಕ್ರಿಯೆ (decomposition reaction)
- ✗ D. ದ್ವಿವಿಘಟನೆ ಕ್ರಿಯೆ

**Q.54** KEGIN AV GUANLKSWU ANAV T BHIJ SSSYGU ŚTUUUK PRDAYSHVALLY BDUKLU SHAI MADUTDUD?

**Ans**
- ✗ A. ಅವು ಕೀಟಗಳನ್ನು ಆಕರ್ಷಿಸಲು ಪ್ರಕಾಶಮಾನವಾದ, ವರ್ಣರಂಜಿತ ಹೂವುಗಳನ್ನು ಉತ್ಪತ್ತಿ ಮಾಡುತ್ತವೆ
- ✗ B. ಅವುಗಳು ನೀರಿನ ನಷ್ಟವನ್ನು ಹೆಚ್ಚಿಸುವ ದೊಡ್ಡ, ಅಗಲವಾದ ಎಲೆಗಳನ್ನು ಹೊಂದಿರುತ್ತವೆ
- ✓ C. ಅವು ಸೂಜಿಯಂತಹ ಅಥವಾ ಶಲಕದಂತಹ ಎಲೆಗಳನ್ನು ಹೊಂದಿದ್ದು ಅವು ನೀರಿನ ನಷ್ಟವನ್ನು ಕಡಿಮೆ ಮಾಡುತ್ತವೆ
- ✗ D. ಅವು ಜಲಚರ ಆವಾಸಸ್ಥಾನಗಳಲ್ಲಿ ಮಾತ್ರ ಸಂತಾನೋತ್ಪತ್ತಿ ಮಾಡುತ್ತವೆ

**Q.55** ದೂರದ ವಸ್ತುವಿಗೆ ಕಣ್ಣಿನ ಮಸೂರವು ರೆಟಿನಾದ 2 cm ಹಿಂದೆ ನೈಜ, ತಲೆಕೆಳಗಾದ ಬಿಂಬವನ್ನು ರೂಪಿಸುತ್ತದೆ. ಕಣ್ಣಿನ ರಚನೆಯಲ್ಲಿ ಯಾವ ದೋಷವು ಈ ಪರಿಸ್ಥಿತಿಗೆ ಕಾರಣವಾಗಬಹುದು?

**Ans**
- ✗ A. ಕಣ್ಣುಗುಡ್ಡೆ ಸಾಮಾನ್ಯಕ್ಕಿಂತ ಉದ್ದವಾಗಿರುತ್ತದೆ
- ✓ B. ಕಣ್ಣುಗುಡ್ಡೆಯು ಸಾಮಾನ್ಯಕ್ಕಿಂತ ಚಿಕ್ಕದಾಗಿರುತ್ತದೆ
- ✗ C. ರೆಟಿನಾದ ದಪ್ಪವಾಗುವಿಕೆ
- ✗ D. ಮಸೂರವು ಸಾಮಾನ್ಯಕ್ಕಿಂತ ವಕ್ರವಾಗಿರುತ್ತದೆ

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

**Q.56** ಒಬ್ಬ ವಿದ್ಯಾರ್ಥಿಯು ಎರಡು ವಿಭಿನ್ನ ಮೂಲಗಳಿಂದ ಬಂದ ಎರಡು ಸಂಗೀತ ಸ್ವರಚಿಹ್ನೆಗಳನ್ನು ಗಮನಿಸುತ್ತಾನೆ. ಸ್ವರಚಿಹ್ನೆ X ನಲ್ಲಿ ಪ್ರತಿ ಸೆಕೆಂಡಿಗೆ ನಿರ್ದಿಷ್ಟ ಬಿಂದುವಿನ ಮೂಲಕ ಹಾದುಹೋಗುವ ಸಂಕೋಚನಗಳ ಸಂಖ್ಯೆಯು ಸ್ವರಚಿಹ್ನೆ Y ಗಿಂತ ಹೆಚ್ಚಾಗಿದೆ, ಆದರೆ ಎರಡರ ತಾರಕತೆ (loudness) ಒಂದೇ ಆಗಿರುತ್ತದೆ. ಧ್ವನಿಯ ಗುಣಲಕ್ಷಣಗಳ ಆಧಾರದ ಮೇಲೆ, ಸ್ವರಚಿಹ್ನೆ Y ಗೆ ಹೋಲಿಸಿದರೆ ಸ್ವರಚಿಹ್ನೆ X ಬಗ್ಗೆ ಏನು ತೀರ್ಮಾನಿಸಬಹುದು?

**Ans**
- ✗ A. ಸ್ವರಚಿಹ್ನೆ X ಸ್ವರಚಿಹ್ನೆ Y ಗಿಂತ ಕಡಿಮೆ ಆವರ್ತನ ಆದರೆ ಹೆಚ್ಚಿನ ಪಾರವನ್ನು ಹೊಂದಿದೆ
- ✓ B. ಸ್ವರಚಿಹ್ನೆ X ಸ್ವರಚಿಹ್ನೆ Y ಗಿಂತ ಹೆಚ್ಚಿನ ಆವರ್ತನ ಆದರೆ ಸಮಾನ ಪಾರವನ್ನು ಹೊಂದಿದೆ
- ✗ C. ಗಾಳಿಯಲ್ಲಿ ಸ್ವರಚಿಹ್ನೆ X ಸ್ವರಚಿಹ್ನೆ Y ಗಿಂತ ವೇಗವಾಗಿ ಪ್ರಯಾಣಿಸುತ್ತದೆ
- ✗ D. ಸ್ವರಚಿಹ್ನೆ Y ಗೆ ಹೋಲಿಸಿದರೆ ಸ್ವರಚಿಹ್ನೆ X ಹೆಚ್ಚಿನ ಪಾ ಹೊಂದಿದೆ, ಆದರೆ ಸಮಾನ ಆವರ್ತನ ಹೊಂದಿದೆ

**Q.57** ರಸಾಯನಶಾಸ್ತ್ರದ ಯಾವ ವಿಭಾಗವು ಮುಖ್ಯವಾಗಿ ಇಂಗಾಲವನ್ನು ಹೊಂದಿರುವ ಸಂಯುಕ್ತಗಳ ಅಧ್ಯಯನದ ಮೇಲೆ ಗಮನ ಕೇಂದ್ರೀಕರಿಸುತ್ತದೆ ಹಾಗೂ ಔಷಧಗಳು ಮತ್ತು ಪ್ಲಾಸ್ಟಿಕ್‌ಗಳ ರಚನೆಯನ್ನು ಅರ್ಥಮಾಡಿಕೊಳ್ಳಲು ಇದು ಅತ್ಯಗತ್ಯವಾಗಿದೆ?

**Ans**
- ✗ A. ಭೌತ ರಸಾಯನಶಾಸ್ತ್ರ
- ✗ B. ನಿರವಯವ (Inorganic) ರಸಾಯನಶಾಸ್ತ್ರ
- ✓ C. ಸಾವಯವ (Organic) ರಸಾಯನಶಾಸ್ತ್ರ
- ✗ D. ವಿಶ್ಲೇಷಣಾತ್ಮಕ ರಸಾಯನಶಾಸ್ತ್ರ

**Q.58** ದೇಹದ ಜೀವಕೋಶಗಳಲ್ಲಿ ಕಂಡುಬರುವ ಅರ್ಧದಷ್ಟು ಸಂಖ್ಯೆಯ ವರ್ಣತಂತುಗಳನ್ನು ಹೊಂದಿರುವ ಗ್ಯಾಮೆಟ್‌ಗಳನ್ನು ಉತ್ಪಾದಿಸಲು ಈ ಕೆಳಗಿನ ಯಾವ ಪ್ರಕ್ರಿಯೆಯು ಕಾರಣವಾಗಿದೆ?

**Ans**
- ✗ A. ಫಲೀಕರಣ (Fertilization)
- ✓ B. ಸಂಖ್ಯಾಕ್ಷೀಣ ಕೋಶ ವಿಭಜನೆ (Meiosis)
- ✗ C. ವಿಭೇದೀಕರಣ (Differentiation)
- ✗ D. ಸಮಸೂತ್ರ ಕೋಶ ವಿಭಜನೆ (Mitosis)

**Q.59** ಈ ಕೆಳಗಿನವುಗಳಲ್ಲಿ ನಿಲಂಬನಕ್ಕೆ (suspension) ಉದಾಹರಣೆ ಯಾವುದು?

**Ans**
- ✓ A. ಕೆಸರು ನೀರು
- ✗ B. ಗಾಳಿ
- ✗ C. ಲಿಂಬೆರಸ (Lemonade)
- ✗ D. ಉಪ್ಪುನೀರು (Saltwater)

**Q.60** ಬಿಳಿ ಬೆಳಕಿನ ಒಂದು ಕಿರಣವು ಗಾಜಿನ ಪಟ್ಟಕದ ಮೂಲಕ ಹಾದುಹೋಗುತ್ತದೆ ಮತ್ತು ಪರದೆಯ ಮೇಲೆ ರೋಹಿತವನ್ನು ರೂಪಿಸುತ್ತದೆ. ನೀವು ಮೊದಲನೆಯ ಪಟ್ಟಕದ ನಂತರ ಅದೇ ರೀತಿಯ ಎರಡನೇ ಪಟ್ಟಕವನ್ನು ಅದಕ್ಕೆ ಸಂಬಂಧಿಸಿದಂತೆ ತಲೆಕೆಳಗಾಗಿ ಇರಿಸಿದರೆ, ರೋಹಿತಕ್ಕೆ ಏನಾಗುತ್ತದೆ?

**Ans**
- ✗ A. ಎರಡು ಪ್ರತ್ಯೇಕ ರೋಹಿತಗಳು ರೂಪುಗೊಳ್ಳುತ್ತವೆ
- ✗ B. ಬಣ್ಣಗಳು ಪ್ರತ್ಯೇಕವಾಗಿ ಉಳಿಯುತ್ತವೆ ಆದರೆ ಪ್ರತಿಲೋಮ ಕ್ರಮದಲ್ಲಿರುತ್ತವೆ
- ✓ C. ರೋಹಿತವು ಬಿಳಿ ಬೆಳಕಾಗಿ ಮತ್ತೆ ಮರುಸಂಯೋಜನೆಗೊಳ್ಳುತ್ತದೆ
- ✗ D. ರೋಹಿತವು ಮತ್ತಷ್ಟು ದೂರ ಹರಡುತ್ತದೆ

**Q.61** ಈ ಕೆಳಗಿನ ಯಾವ ಅಣುವು ಕೇವಲ ಒಂದು ಮೂಲಧಾತುವಿನ ಪರಮಾಣುಗಳನ್ನು ಹೊಂದಿದೆ?

**Ans**
- ✗ A. $NH_3$
- ✗ B. $CO_2$
- ✗ C. HCl
- ✓ D. $N_2$

Get India's No 1 Vocab Preparation App for FREE : Blackbook : English Vocabulary

**Q.62** ಒಬ್ಬ ವಿದ್ಯಾರ್ಥಿಯು ಫೀನಾಫ್ತಲೀನ್ ಮತ್ತು ಮೀಥೈಲ್ ಆರೇಂಜ್ ಅನ್ನು ಪ್ರತ್ಯೇಕವಾಗಿ P, Q, ಮತ್ತು R ಎಂಬ ಮೂರು ವಿಭಿನ್ನ ದ್ರಾವಣಗಳಿಗೆ ಸೇರಿಸುತ್ತಾನೆ. ವೀಕ್ಷಣೆಗಳು ಈ ಕೆಳಗಿನಂತೆ ಕಂಡುಬರುತ್ತವೆ:

| ದ್ರಾವಣ | ಫೀನಾಫ್ತಲೀನ್ | ಮೀಥೈಲ್ ಆರೇಂಜ್ |
|---|---|---|
| P | ಬಣ್ಣರಹಿತ | ಕೆಂಪು |
| Q | ಗುಲಾಬಿ | ಹಳದಿ |
| R | ಬಣ್ಣರಹಿತ | ಆರೇಂಜ್ |

**Ans**
- ✔ A. P – ಆಮ್ಲೀಯ, Q – ಪ್ರತ್ಯಾಮ್ಲೀಯ, R – ತಟಸ್ಥ
- ✘ B. P – ಪ್ರತ್ಯಾಮ್ಲೀಯ, Q – ಆಮ್ಲೀಯ , R – ತಟಸ್ಥ
- ✘ C. P – ತಟಸ್ಥ, Q – ಆಮ್ಲೀಯ, R – ಪ್ರತ್ಯಾಮ್ಲೀಯ
- ✘ D. P – ಆಮ್ಲೀಯ , Q – ತಟಸ್ಥ, R – ಪ್ರತ್ಯಾಮ್ಲೀಯ

**Q.63** ಪರಮಾಣು ದ್ರವ್ಯರಾಶಿಗಳು: ಪೊಟ್ಯಾಸಿಯಮ್ 39 u, ಸಾರಜನಕ 14 u, ಮತ್ತು ಆಮ್ಲಜನಕ 16 u ಆಗಿದ್ದರೆ, ಪೊಟ್ಯಾಸಿಯಮ್ ನೈಟ್ರೇಟ್ ($KNO_3$) ನ ಘಟಕ ಸೂತ್ರ ರಾಶಿ (formula unit mass) ಎಷ್ಟು?

**Ans**
- ✘ A. 68 u
- ✔ B. 101 u
- ✘ C. 69 u
- ✘ D. 70 u

**Q.64** ________ ಶೇಖರಣೆಯಿಂದ ತೀವ್ರವಾದ ವ್ಯಾಯಾಮದ ಸಮಯದಲ್ಲಿ ಸ್ನಾಯು ಸೆಡೆತ ಉಂಟಾಗುತ್ತದೆ.

**Ans**
- ✘ A. ಇಂಗಾಲದ ಡೈಆಕ್ಸೈಡ್
- ✘ B. ಆಮ್ಲಜನಕ
- ✘ C. ಎಥೆನಾಲ್
- ✔ D. ಲ್ಯಾಕ್ಟಿಕ್ ಆಮ್ಲ

**Q.65** 2 ನಿಮಿಷಗಳಲ್ಲಿ 120 ಜೂಲ್‌ಗಳ ಶಕ್ತಿಯನ್ನು ಬಳಸುವ ಒಂದು ವಿದ್ಯುದ್ದೀಪದಿಂದ ಎಷ್ಟು ವಿದ್ಯುಚ್ಛಕ್ತಿ ಪ್ರಾಪ್ತಿಯಾಗುತ್ತದೆ?

**Ans**
- ✘ A. 60 ವ್ಯಾಟ್
- ✔ B. 1 ವ್ಯಾಟ್
- ✘ C. 240 ವ್ಯಾಟ್
- ✘ D. 14400 ವ್ಯಾಟ್

**Q.66** ಒಂದು ವೇಳೆ ಗಾಳಿಯಲ್ಲಿ ಬೆಳಕಿನ ವೇಗವು c ಮತ್ತು ಮಾಧ್ಯಮದಲ್ಲಿ ಬೆಳಕಿನ ವೇಗವು v ಆಗಿದ್ದರೆ, ಆ ಮಾಧ್ಯಮದ ವಕ್ರೀಭವನ ಸೂಚ್ಯಂಕ $n_m$ ಅನ್ನು ಹೇಗೆ ವ್ಯಾಖ್ಯಾನಿಸಲಾಗುತ್ತದೆ?

**Ans**
- ✔ A. $n_m = c/v$
- ✘ B. $n_m = v/c$
- ✘ C. $n_m = c - v$
- ✘ D. $n_m = c \times v$

**Q.67** ಒಂದು ಚೆಂಡು ಬೆಟ್ಟದಿಂದ ಕೆಳಗೆ ಉರುಳಿ ನಿಶ್ಚಲ ಸ್ಥಿತಿಗೆ ಬಂದಾಗ, ಚೆಂಡು-ಭೂಮಿ (ball-earth) ವ್ಯವಸ್ಥೆಯ ಒಟ್ಟು ಶಕ್ತಿಯನ್ನು ಹೇಗೆ ನಿರ್ವಹಿಸಲಾಗುತ್ತದೆ?

**Ans**
- ✔ A. ಆರಂಭಿಕ ಪ್ರಚ್ಛನ್ನ ಶಕ್ತಿಯು ಶಾಖ ಮತ್ತು ಶಬ್ದ ಶಕ್ತಿಯಾಗುತ್ತದೆ
- ✘ B. ಚೆಂಡು ನಿಂತಾಗ ಒಟ್ಟು ಶಕ್ತಿಯು ನಾಶವಾಗುತ್ತದೆ
- ✘ C. ಎಲ್ಲಾ ಶಕ್ತಿಯು ಪ್ರಚ್ಛನ್ನ ಶಕ್ತಿಯಾಗಿ ಉಳಿಯುತ್ತದೆ
- ✘ D. ಎಲ್ಲಾ ಶಕ್ತಿಯು ಚಲನ ಶಕ್ತಿಯಾಗಿ ಉಳಿಯುತ್ತದೆ

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.68** ಒಂಟರೆ ಮತ್ತು ಒಂಟರೆ ಮತ್ತು ಒಂಟೆ ಮತ್ತು ಒಂಟೆ ಅಥವಾ ಒಂಟೆ ಅಥವಾ ಒಂಟೆ/ಒಂಟೆ/ ಒಂಟೆ ಮತ್ತು ಒಂಟೆ/ಒಂಟೆ ಅಥವಾ ಒಂಟೆ ಮತ್ತು ಒಂಟೆ ಮತ್ತು ಎಂಟೆ/ಒಂಟೆ ಮತ್ತು ಎನ್ವೆ/ ಒಂಟೆ ಮತ್ತು ಎಂಟೆ ಮತ್ತು ಎನ್ವೆ/ಎ ಮತ್ತು ಎ. ಆರ್. ಆರ್. ಆರ್. ಆರ್. ಎಲ್. ಎಲ್. ಎಲ್. ಎಲ್. ಡಿಡೆ/ಒಂಟೆ ಮತ್ತು ಎ. ಎನ್. ಆರ್. ಆರ್. ಆರ್. ಎ. ಆರ್. ಎಲ್. ಎಲ್. ಡಿಡೆ

**Ans**
- ✔ A. ಆ ಅಣುವು ಚತುರ್ಮುಖೀಯ ಆಕಾರದಲ್ಲಿದೆ.
- ✘ B. ಅಣುವು ತ್ರಿಕೋನೀಯ ಪಿರಮಿಡ್ ಆಕಾರದಲ್ಲಿದೆ
- ✘ C. ಅಣುವು ತ್ರಿಕೋನೀಯ ಸಮತಲ ಆಕಾರದಲ್ಲಿದೆ.
- ✘ D. ಈ ಅಣುವು ರೇಖೀಯ ಆಕಾರದಲ್ಲಿದೆ.

**Q.69** ಋತುಚಕ್ರದ ಸಮಯದಲ್ಲಿ ಫಲೀಕರಣವು ನಡೆದರೆ ಋತುಸ್ರಾವ ಏಕೆ ಸಂಭವಿಸುವುದಿಲ್ಲ ಎಂಬುದನ್ನು ಈ ಕೆಳಗಿನ ಯಾವ ಆಯ್ಕೆಯು ವಿವರಿಸುತ್ತವೆ?

**Ans**
- ✘ A. ಅಂಡಾಶಯವು ಅಂಡಾಣು ಕೋಶಗಳನ್ನು ಉತ್ಪಾದಿಸುವುದನ್ನು ಮತ್ತು ಬಿಡುಗಡೆ ಮಾಡುವುದನ್ನು ಶಾಶ್ವತವಾಗಿ ನಿಲ್ಲಿಸುತ್ತದೆ
- ✘ B. ಫಲೀಕರಣದ ನಂತರ ಗರ್ಭಾಶಯವು ನೇರವಾಗಿ ಜರಾಯು (placenta) ಒಳಗೆ ಬೆಳವಣಿಗೆಯಾಗುತ್ತದೆ
- ✘ C. ಫಲೀಕರಣದ ನಂತರ ಗರ್ಭಾಶಯದ ಒಳಪದರವು ತಕ್ಷಣವೇ ಉದುರಿಹೋಗುತ್ತದೆ
- ✔ D. ಬೆಳೆಯುತ್ತಿರುವ ಭ್ರೂಣಕ್ಕೆ ನೆರವಾಗಲು ಗರ್ಭಾಶಯದ ಒಳಪದರವು ಹಾಗೇ ಇಡಲ್ಪಡುತ್ತದೆ

**Q.70** ಸ್ಥಿರ ಬಲದಿಂದ ಆಗಿರುವ ಕೆಲಸವನ್ನು ಲೆಕ್ಕಹಾಕಲು ಈ ಕೆಳಗಿನ ಯಾವ ಪರಿಮಾಣವು ಬೇಕಾಗುತ್ತದೆ?

**Ans**
- ✔ A. ಬಲ ಮತ್ತು ಸ್ಥಾನಪಲ್ಲಟದ ಪರಿಮಾಣ
- ✘ B.
ಬಲದ ಪರಿಮಾಣ ಮಾತ್ರ
- ✘ C. ಚಲನೆಗೆ ತೆಗೆದುಕೊಂಡ ಸಮಯ
- ✘ D. ಚಲಿಸಿದ ದೂರ ಮಾತ್ರ

**Q.71** ಕೈಗಾರಿಕೆಗಳಲ್ಲಿ ಹೈಡ್ರೋಕ್ಲೋರಿಕ್ ಆಮ್ಲ ಮತ್ತು ಸೋಡಿಯಂ ಹೈಡ್ರಾಕ್ಸೈಡ್ ನಡುವಿನ ಕ್ರಿಯೆ ಅದೇಕೆ ಮುಖ್ಯವಾಗಿದೆ?

**Ans**
- ✔ A. ಇದು ಟೇಬಲ್ ಉಪ್ಪು ಮತ್ತು ನೀರನ್ನು ತಯಾರಿಸಲು ಸಹಾಯ ಮಾಡುತ್ತದೆ
- ✘ B. ಇದನ್ನು ವಿದ್ಯುತ್ ಉತ್ಪಾದಿಸಲು ಬಳಸಲಾಗುತ್ತದೆ
- ✘ C. ಇದು ಅಮೋನಿಯಾ ತಯಾರಿಕೆಗೆ ಅಗತ್ಯವಿದೆ
- ✘ D. ಇದು ನೇರವಾಗಿ ಸಾಬೂನನ್ನು ಉತ್ಪಾದಿಸುತ್ತದೆ

**Q.72** ಒಂದು ರೈಲು ಸ್ಥಿರ ವೇಗೋತ್ಕರ್ಷದೊಂದಿಗೆ ಚಲಿಸುತ್ತದೆ ಮತ್ತು ಅದರ ವೇಗ-ಕಾಲ ನಕ್ಷೆಯು ಒಂದು ಸರಳ ರೇಖೆಯಾಗಿದೆ. ಒಂದು ವೇಳೆ ನಕ್ಷೆಯು (0 s, 5 m/s) ಮತ್ತು (8 s, 21 m/s) ಬಿಂದುಗಳ ಮೂಲಕ ಹಾದು ಹೋದರೆ, 8 ಸೆಕೆಂಡುಗಳಲ್ಲಿ ರೈಲಿನ ಒಟ್ಟು ಸ್ಥಾನಪಲ್ಲಟ ಎಷ್ಟು?

**Ans**
- ✘ A. 128 m
- ✘ B. 112 m
- ✘ C. 168 m
- ✔ D. 104 m

**Q.73** ಮಾನವರಲ್ಲಿ ಶ್ವಾಸಕೋಶದಿಂದ ದೇಹದ ಅಂಗಾಂಶಗಳಿಗೆ ಆಮ್ಲಜನಕವನ್ನು ಹೇಗೆ ಸಾಗಿಸಲಾಗುತ್ತದೆ?

**Ans**
- ✘ A. ಸಂಪೂರ್ಣವಾಗಿ ರಕ್ತದ ಪ್ಲಾಸ್ಮಾದಲ್ಲಿಯೇ ಕರಗುವಂತೆ
- ✔ B. ಕೆಂಪು ರಕ್ತ ಕಣಗಳಲ್ಲಿ ಹಿಮೋಗ್ಲೋಬಿನ್ ಗೆ ಬದ್ಧವಾಗಿರುವಂತೆ
- ✘ C. ಇಂಗಾಲದ ಡೈಆಕ್ಸೈಡ್ ರಾಸಾಯನಿಕವಾಗಿ ಪರಿವರ್ತನೆಗೊಳ್ಳುವಂತೆ
- ✘ D. ರಕ್ತಪ್ರವಾಹದಲ್ಲಿನ ಅನಿಲದ ಮುಕ್ತ ಗುಳ್ಳೆಗಳಂತೆ

**Q.74** ಲೋಹವು ಅಲೋಹದೊಂದಿಗೆ ವರ್ತಿಸಿದಾಗ ರೂಪುಗೊಳ್ಳುವ ಬಂಧದ ಪ್ರಕಾರವನ್ನು ಈ ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮವಾಗಿ ವಿವರಿಸುತ್ತದೆ?

**Ans**
- ✔ A. ಅಯಾನಿಕ ಬಂಧ
- ✘ B. ಸಹವೇಲೆನ್ಸಿಯ ಬಂಧ
- ✘ C. ಜಲಜನಕದ ಬಂಧ
- ✘ D. ಲೋಹಿಯ ಬಂಧ

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.75** ನೀರಿನ ಅಣುಗಳು ಹೆಚ್ಚು ಸಾಂದ್ರತೆಯಿರುವ ಜಾಗದಿಂದ ಕಡಿಮೆ ಸಾಂದ್ರತೆಯಿರುವ ಜಾಗಕ್ಕೆ ಆಯ್ದ ಪ್ರವೇಶಸಾಧ್ಯ ಪೊರೆಯ ಮೂಲಕ ಚಲಿಸುವ ಪ್ರಕ್ರಿಯೆಯನ್ನು ಏನೆಂದು ಕರೆಯುತ್ತಾರೆ?

**Ans**
- ✗ A. ಸಕ್ರಿಯ ಸಾಗಾಣಿಕೆ
- ✗ B. ಶೋಧನೆ
- ✓ C. ಅಭಿಸರಣೆ (Osmosis)
- ✗ D. ವಿಸರಣೆ (Diffusion)

**Q.76** এভ স্তিতিয় সিলিন্দ্রগু বেয়্গ্তীগে তেন্ত একনু আন্দিরুৱ tāpū টু হান prissar

**Ans**
- ✓ A. ಹೇರಳವಾದ ಸಾವಯವ ಪದಾರ್ಥವನ್ನು ಹೊಂದಿರುವ ಬೆಚ್ಚಗಿನ ಮತ್ತು ತೇವಾಂಶವುಳ್ಳ ಪರಿಸರ
- ✗ B. ವರ್ಷವಿಡೀ ಹೆಪ್ಪುಗಟ್ಟಿದ ಮಣ್ಣಿನೊಂದಿಗೆ ಅತ್ಯಂತ ಶೀತ ಪರಿಸರ
- ✗ C. ಅತಿ ಕಡಿಮೆ ತೇವಾಂಶವನ್ನು ಹೊಂದಿರುವ ಬಿಸಿ ಮರುಭೂಮಿಯ ಪರಿಸರಗಳು
- ✗ D. ತೀವ್ರವಾದ ಸೂರ್ಯನ ಬೆಳಕನ್ನು ಹೊಂದಿರುವ ತಂಪು ಮತ್ತು ಒಣ ಪರಿಸರ

**Q.77** ಒಂದು ವಸ್ತುವನ್ನು ಪೀನ ಮಸೂರದಿಂದ 10 cm ದೂರದಲ್ಲಿ ಇರಿಸಲಾಗುತ್ತದೆ. ಮಸೂರವು -3 ವರ್ಧನೆಯೊಂದಿಗೆ ನೈಜ ಮತ್ತು ವರ್ಧಿತ ಬಿಂಬವನ್ನು ಮೂಡಿಸುತ್ತದೆ. ಹಾಗಾದರೆ ಬಿಂಬದ ಸ್ಥಾನವೇನು?

**Ans**
- ✗ A. $-5.0$ cm
- ✗ B. $-30.0$ cm
- ✓ C. $+30.0$ cm
- ✗ D. $+5.0$ cm

**Q.78** ಒಬ್ಬ ವಿದ್ಯಾರ್ಥಿಗೆ ಕೆಸರು ನೀರು, ಗಾಳಿ, ಹಾಲು ಮತ್ತು ನೀರಿನಲ್ಲಿ ಕರಗಿದ ಉಪ್ಪು ಎಂಬ ನಾಲ್ಕು ಮಾದರಿಗಳನ್ನು ನೀಡಲಾಗುತ್ತದೆ. ಜೊತೆಗೆ, ಅಸಮರೂಪ ಮಿಶ್ರಣವನ್ನು ಅತ್ಯುತ್ತಮವಾಗಿ ಪ್ರತಿನಿಧಿಸುವ ಒಂದನ್ನು ಆಯ್ಕೆ ಮಾಡುವ ಕಾರ್ಯವನ್ನು ನೀಡಲಾಗಿದೆ. ವಿದ್ಯಾರ್ಥಿಯು ಯಾವ ಮಾದರಿಯನ್ನು ಆಯ್ಕೆ ಮಾಡಬೇಕು?

**Ans**
- ✗ A. ಉಪ್ಪು ನೀರು
- ✗ B. ಗಾಳಿ
- ✗ C. ಹಾಲು
- ✓ D. ಕೆಸರಿನ ನೀರು

**Q.79** ರಸಾಯನಶಾಸ್ತ್ರದ ಯಾವ ಶಾಖೆಯು ಪ್ರಮುಖವಾಗಿ ಇಂಗಾಲವನ್ನು ಹೊಂದಿರುವ ಸಂಯುಕ್ತಗಳ ಅಧ್ಯಯನದ ಮೇಲೆ ಗಮನ ಕೇಂದ್ರೀಕರಿಸುತ್ತದೆ?

**Ans**
- ✗ A. ಭೌತ ರಸಾಯನಶಾಸ್ತ್ರ
- ✓ B. ಸಾವಯವ ರಸಾಯನಶಾಸ್ತ್ರ
- ✗ C. ನಿರವಯವ ರಸಾಯನಶಾಸ್ತ್ರ
- ✗ D. ವಿಶ್ಲೇಷಣಾತ್ಮಕ ರಸಾಯನಶಾಸ್ತ್ರ

**Q.80** ದೊಡ್ಡ ನಗರಗಳಲ್ಲಿ ಯಾವ ಮಾನವ ಚಟುವಟಿಕೆಯು ನೆಲಮಟ್ಟದ ಹೊಗೆಯ ರಚನೆಯ ಅಪಾಯವನ್ನು ಗಮನಾರ್ಹವಾಗಿ ಹೆಚ್ಚಿಸುತ್ತದೆ?

**Ans**
- ✗ A. ಮನೆಯ ತ್ಯಾಜ್ಯವನ್ನು ನಿಯಮಿತವಾಗಿ ಮರುಬಳಕೆ ಮಾಡುವುದು
- ✓ B. ಗ್ಯಾಸೋಲಿನ್ ಚಾಲಿತ ವಾಹನಗಳನ್ನು ಬಳಸುವುದು
- ✗ C. ರಸ್ತೆಯ ಬದಿಯಲ್ಲಿ ಮರಗಳನ್ನು ಬೆಳೆಸುವುದು
- ✗ D. ಛಾವಣಿಗಳ ಮೇಲೆ ಸೌರ ಫಲಕಗಳನ್ನು ಅಳವಡಿಸುವುದು

**Q.81** ಯಾವ ಸಮೀಕರಣವು ಆಮ್ಲಜನಕಯುಕ್ತ (aerobic) ಉಸಿರಾಟವನ್ನು ಸರಿಯಾಗಿ ಪ್ರತಿನಿಧಿಸುತ್ತದೆ?

**Ans**
- ✗ A. ಗ್ಲೂಕೋಸ್ → ಆಲ್ಕೋಹಾಲ್ + $CO_2$ + ಶಕ್ತಿ
- ✓ B. ಗ್ಲೂಕೋಸ್ + $O_2$ → $CO_2$ + $H_2O$ + ಶಕ್ತಿ
- ✗ C. ಗ್ಲೂಕೋಸ್ → ಲ್ಯಾಕ್ಟಿಕ್ ಆಮ್ಲ + ಶಕ್ತಿ
- ✗ D. ಗ್ಲೂಕೋಸ್ + $CO_2$ → $O_2$ + $H_2O$ + ಶಕ್ತಿ

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

**Q.82** ಒಂದು ಸೊಲೆನಾಯ್ಡ್ ಒಳಗೆ ಸಮಾನಾಂತರ ನೇರ ಕಾಂತೀಯ ಕ್ಷೇತ್ರ ರೇಖೆಗಳ ಉಪಸ್ಥಿತಿಯು ಏನನ್ನು ಸೂಚಿಸುತ್ತದೆ?

**Ans**

✔ A. ಸೋಲೆನಾಯ್ಡ್ ನಾದ್ಯಂತ ಕಾಂತೀಯ ಕ್ಷೇತ್ರವು ಏಕರೂಪವಾಗಿರುತ್ತದೆ

✘ B. ಸೋಲೆನಾಯ್ಡ್ ಒಳಗೆ ಯಾವುದೇ ಕಾಂತೀಯ ಕ್ಷೇತ್ರವಿರುವುದಿಲ್ಲ

✘ C. ಸೋಲೆನಾಯ್ಡ್ ಒಳಗಿನ ಕಾಂತೀಯ ಕ್ಷೇತ್ರವು ಬಿಂದುವಿನಿಂದ ಬಿಂದುವಿಗೆ ಬದಲಾಗುತ್ತದೆ

✘ D. ಸೋಲೆನಾಯ್ಡ್ ನ ತುದಿಗಳ ಬಳಿ ಕಾಂತೀಯ ಕ್ಷೇತ್ರವು ಅತ್ಯಂತ ಪ್ರಬಲವಾಗಿರುತ್ತದೆ

**Q.83** ಪ್ರೋಟಾನ್‌ನ ಆವೇಶ ಯಾವುದು?

**Ans**

✘ A. ಋಣ

✘ B. ಯಾವುದೇ ಆವೇಶವಿಲ್ಲ

✘ C. ತಟಸ್ಥ

✔ D. ಧನ

**Q.84** ವಿದ್ಯುತ್ ಪ್ರವಾಹವಿರುವ ವೃತ್ತಾಕಾರದ ಸುರುಳಿಯ ಕುಣಿಕೆಯ ಬಳಿ ಒಂದು ದಿಕ್ಸೂಚಿಯನ್ನು ಇರಿಸಿದಾಗ, ದಿಕ್ಸೂಚಿ ಸೂಜಿಯ ಹೊಂದಾಣಿಕೆಯು ಸುರುಳಿಯಿಂದ ಉತ್ಪತ್ತಿಯಾಗುವ ಕ್ಷೇತ್ರ ರೇಖೆಗಳ ಬಗ್ಗೆ ಏನನ್ನು ತಿಳಿಯಪಡಿಸುತ್ತದೆ?

**Ans**

✘ A. ದಿಕ್ಸೂಚಿ ಸೂಜಿಯು ಯಾವಾಗಲೂ ಸುರುಳಿಯ ಮಧ್ಯಭಾಗದ ಕಡೆಗೆ ನೇರವಾಗಿ ನಿರ್ದೇಶಿಸಲ್ಪಡುತ್ತದೆ, ಇದು ಕ್ಷೇತ್ರದ ಒಳಮುಖ ದಿಕ್ಕನ್ನು ಪ್ರತಿಬಿಂಬಿಸುತ್ತದೆ

✘ B. ದಿಕ್ಸೂಚಿ ಸೂಜಿಯು ಸ್ಥಿರವಾದ ದಿಕ್ಕಿಲ್ಲದೆ ಯಾದೃಚ್ಛಿಕವಾಗಿ ಚಲಿಸುತ್ತದೆ, ಇದು ಏರಿಳಿತದ ಕ್ಷೇತ್ರ ರೇಖೆಗಳನ್ನು ತೋರಿಸುತ್ತದೆ

✔ C. ದಿಕ್ಸೂಚಿ ಸೂಜಿಯು ಆ ಬಿಂದುವಿನಲ್ಲಿರುವ ವೃತ್ತಾಕಾರದ ಕ್ಷೇತ್ರ ರೇಖೆಗಳಿಗೆ ಸ್ಪರ್ಶಕವಾಗಿ ಜೋಡಿಸಲ್ಪಟ್ಟಿರುತ್ತದೆ, ಇದು ಕಾಂತಕ್ಷೇತ್ರದ ದಿಕ್ಕನ್ನು ಸೂಚಿಸುತ್ತದೆ

✘ D. ದಿಕ್ಸೂಚಿ ಸೂಜಿಯು ಕ್ಷೇತ್ರ ರೇಖೆಗಳಿಗೆ ಲಂಬ ಕೋನಗಳಲ್ಲಿ ಜೋಡಿಸಲ್ಪಟ್ಟಿರುತ್ತದೆ, ಇದು ಕ್ಷೇತ್ರದ ಲಂಬ ಸ್ವರೂಪವನ್ನು ಸೂಚಿಸುತ್ತದೆ

**Q.85** ಒಂದು ಮನೆಯವರು ಒಂದು ವಿದ್ಯುತ್ ಇಸ್ತ್ರಿ ಪೆಟ್ಟಿಗೆ, ಒಂದು ರೆಫ್ರಿಜರೇಟರ್ ಮತ್ತು ಒಂದು LED ಟೆಲಿವಿಷನ್ ಅನ್ನು ಏಕಕಾಲದಲ್ಲಿ ಬಳಸುತ್ತಾರೆ. ವಿದ್ಯುನ್ಮಂಡಲದ ಮೇಲೆ ಅತಿಯಾಗಿ ಹೊರೆ ಹಾಕದೆ ಸುರಕ್ಷಿತ ಕಾರ್ಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಯಾವ ಪ್ರಮುಖ ಅಂಶವನ್ನು ಪರಿಗಣಿಸಬೇಕು?

**Ans**

✘ A. ಪ್ರತಿ ಉಪಕರಣಕ್ಕೆ ಸರಬರಾಜು ಮಾಡಲಾದ ವೋಲ್ಟೇಜ್ ಒಂದೇ ಪ್ರಮಾಣದಲ್ಲಿರಬೇಕು.

✘ B. ಪ್ರತಿಯೊಂದು ಹೆಚ್ಚುವರಿ ಉಪಕರಣಕ್ಕೆ ಸಂಪರ್ಕಿಸುವ ತಂತಿಯ ದಪ್ಪವನ್ನು ಹೆಚ್ಚಿಸಬೇಕು.

✘ C. ಉಪಕರಣಗಳನ್ನು ಸ್ವಿಚ್ ಆನ್ ಮಾಡುವ ಅನುಕ್ರಮವನ್ನು ರೆಗ್ಯುಲೇಟ್ ಮಾಡಬೇಕು.

✔ D. ಎಲ್ಲಾ ಉಪಕರಣಗಳು ಸೆಳೆಯುವ ಒಟ್ಟು ವಿದ್ಯುತ್ ಪ್ರವಾಹವು ವಿದ್ಯುನ್ಮಂಡಲದ ರೇಟೆಡ್ ಸಾಮರ್ಥ್ಯವನ್ನು ಮೀರಬಾರದು.

**Q.86** ವೃಷಣಗಳನ್ನು ಹೊಂದಿರುವ ವೃಷಣಕೋಶದ (scrotum) ಕಾರ್ಯವನ್ನು ಕೆಳಗಿನವುಗಳಲ್ಲಿ ಯಾವುದು ವಿವರಿಸುತ್ತದೆ?

**Ans**

✔ A. ವೀರ್ಯ ಉತ್ಪಾದನೆಗೆ ವೃಷಣಗಳನ್ನು ತಂಪಾಗಿಡುವುದು

✘ B. ಸ್ಖಲನಕ್ಕೆ ಮೊದಲು ವೀರ್ಯವನ್ನು ಸಂಗ್ರಹಿಸಲು

✘ C. ಟೆಸ್ಟೋಸ್ಟೆರಾನ್ ಹಾರ್ಮೋನುಗಳನ್ನು ಉತ್ಪಾದಿಸುವುದು

✘ D. ವೀರ್ಯಾಣು ಕಡಿಮೆ ದೂರ ಚಲಿಸುವಂತೆ ಮಾಡುವುದು

**Q.87** ಈ ಕೆಳಗಿನ ಯಾವುದು ನೀರ್ಗೊಳವೆ ಅಂಗಾಂಶದ (Xylem tissue) ಭಾಗವಲ್ಲ?

**Ans**

✘ A. ನಾಳಗಳು

✘ B. ಟ್ರಾಕಿಡ್ ಗಳು

✔ C. ಜರಡಿ ನಳಿಕೆ

✘ D. ನೀರ್ಗೊಳವೆ ನಾರುಗಳು

**Q.88** ಭೂಮಿಯ ಗೋಳದ ಆಕಾರವು ಸೌರ ಶಕ್ತಿಯ ಹಂಚಿಕೆಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

**Ans**

✘ A. ಇದು ಎಲ್ಲಾ ಅಕ್ಷಾಂಶಗಳಲ್ಲಿ ವರ್ಷಪೂರ್ತಿ ಒಂದು ದಿನಕ್ಕೆ ಸಮಾನ ಹಗಲಿನ ಅವಧಿಯನ್ನು ನೀಡುತ್ತದೆ

✔ B. ಬೇರೆ ಬೇರೆ ಅಕ್ಷಾಂಶಗಳಲ್ಲಿ ಸೌರ ಶಕ್ತಿಯು ಅಸಮಾನವಾಗಿ ಹರಡುವುದು

✘ C. ಸೌರ ಶಕ್ತಿಯು ಸಮಾನವಾಗಿ ಹಂಚಿಕೆಯಾಗುವುದರಿಂದ ಎಲ್ಲಾ ಪ್ರದೇಶಗಳು ಸಮಾನವಾಗಿ ಬೆಚ್ಚಗಿರುತ್ತವೆ

✘ D. ಇದು ಇತರ ಅಕ್ಷಾಂಶಗಳಿಗಿಂತ ಧ್ರುವಗಳ ಮೇಲೆ ಹೆಚ್ಚಿನ ಸೂರ್ಯನ ಬೆಳಕು ಬೀಳುವಂತೆ ಮಾಡುತ್ತದೆ

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

**Q.89** ಒಬ್ಬ ವಿದ್ಯಾರ್ಥಿಯು ಒಂದು ನೈಜ ವಸ್ತುವಿಗೆ ಮಸೂರ ಸೂತ್ರವನ್ನು ಬಳಸುವಾಗ ಧನಾತ್ಮಕ ವಸ್ತುವಿನ ದೂರವನ್ನು ತಪ್ಪಾಗಿ ಲೆಕ್ಕ ಹಾಕುತ್ತಾನೆ. ಸಾಂಪ್ರದಾಯಿಕ ಸಂಕೇತದ ಆಧಾರದ ಮೇಲೆ, ಈ ಲೆಕ್ಕಾಚಾರದಲ್ಲಿನ ಪರಿಕಲ್ಪನಾ ದೋಷವೇನು?

**Ans**

✗ A. ಒಂದು ನೈಜ ವಸ್ತುವಿಗೆ ವಸ್ತು ದೂರವು ಯಾವಾಗಲೂ ಧನಾತ್ಮಕವಾಗಿರಬೇಕು

✗ B. ವಸ್ತು ದೂರದ ಸಂಕೇತವು ಸಂಗಮ ದೂರವನ್ನು ಅವಲಂಬಿಸಿರುತ್ತದೆ

✓ C. ಒಂದು ನೈಜ ವಸ್ತುವನ್ನು ಮಸೂರದ ಎಡಭಾಗದಲ್ಲಿ ಇರಿಸುವುದರಿಂದ ವಸ್ತು ದೂರವು ಋಣಾತ್ಮಕವಾಗಿರಬೇಕು

✗ D. ವಸ್ತು ದೂರದ ಸಂಕೇತವು ವಸ್ತುವಿನ ಎತ್ತರವನ್ನು ಅವಲಂಬಿಸಿರುತ್ತದೆ

**Q.90** ಒಬ್ಬ ರೋಗಿಗೆ ಐಚ್ಛಿಕವಾಗಿ ತನ್ನ ತೋಳನ್ನು ಚಲಿಸಲು ಸಾಧ್ಯವಾಗುತ್ತಿಲ್ಲ, ಆದರೆ ನಿದ್ರೆಯ ಸಮಯದಲ್ಲಿ ಆ ತೋಳಿನಲ್ಲಿ ಲಯಬದ್ಧ ಸಂಕೋಚನಗಳು ಕಾಣಿಸಿಕೊಳ್ಳುತ್ತಿವೆ. ಸ್ನಾಯು ಅಂಗಾಂಶದ ಕುರಿತ ನಿಮ್ಮ ತಿಳುವಳಿಕೆಯ ಆಧಾರದ ಮೇಲೆ ಈ ವಿದ್ಯಮಾನದಲ್ಲಿ ಯಾವ ಅಂಗಾಂಶ ವಿಧಗಳು ಹೆಚ್ಚಾಗಿ ಒಳಗೊಂಡಿರುವ ಸಾಧ್ಯತೆಯಿದೆ?

**Ans**

✗ A. ನಯ ಮತ್ತು ಹೃದಯ ಸ್ನಾಯುಗಳೆರಡೂ ದುರ್ಬಲಗೊಂಡಿವೆ, ಆದರೆ ಅಸ್ಥಿಪಂಜರದ ಸ್ನಾಯುಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ.

✗ B. ಎಲ್ಲಾ ಸ್ನಾಯು ಪ್ರಕಾರಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತವೆ.

✓ C. ಅಸ್ಥಿಪಂಜರದ ಸ್ನಾಯು ದುರ್ಬಲಗೊಂಡಿದೆ, ಆದರೆ ನಯ ಸ್ನಾಯುಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತಿವೆ.

✗ D. ನಯ ಸ್ನಾಯುಗಳು ಮಾತ್ರ ಸಾಮಾನ್ಯವಾಗಿ ಕಾರ್ಯನಿರ್ವಹಿಸುತ್ತವೆ, ಆದರೆ ಅಸ್ಥಿಪಂಜರ ಮತ್ತು ಹೃದಯದ ಸ್ನಾಯುಗಳೆರಡೂ ದುರ್ಬಲಗೊಂಡಿವೆ.

Section : **General Awareness**

**Q.91** ಜೂನ್ 2026 ರಲ್ಲಿ ಬಿಡುಗಡೆಯಾದ 2025-26ನೇ ಹಣಕಾಸು ವರ್ಷದ ವಾರ್ಷಿಕ ಒಟ್ಟು ದೇಶೀಯ ಉತ್ಪನ್ನದ ತಾತ್ಕಾಲಿಕ ಅಂದಾಜುಗಳು ಮತ್ತು 2025-26 ರ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದ (Q4, ಜನವರಿ-ಮಾರ್ಚ್) ಜಿಡಿಪಿಯ ತ್ರೈಮಾಸಿಕ ಅಂದಾಜಿನ ಪ್ರಕಾರ, 2025–26ರ ಹಣಕಾಸು ವರ್ಷದ ಭಾರತದ ನೈಜ ಜಿಡಿಪಿಯ ಅಂದಾಜು ಬೆಳವಣಿಗೆಯ ದರ ಎಷ್ಟು?

**Ans**

✗ A. 6.9%

✗ B. 7.1%

✗ C. 7.4%

✓ D. 7.7%

**Q.92** ಜುಲೈ 2026 ರಲ್ಲಿ, ಯಾವ ಆಧಾರ ವರ್ಷದೊಂದಿಗೆ ಸೇವಾ ಉತ್ಪಾದನಾ ಸೂಚ್ಯಂಕದ (Index of Services Production - ISP) ಪ್ರಾಯೋಗಿಕ ಆವೃತ್ತಿಯನ್ನು ಪ್ರಾರಂಭಿಸಲಾಯಿತು?

**Ans**

✗ A. 2021–22

✗ B. 2023–24

✗ C. 2022–23

✓ D. 2024–25

**Q.93** ಆಗಸ್ಟ್ 2026ರ ಸಭೆಯಲ್ಲಿ, ಹಣಕಾಸು ನೀತಿ ಸಮಿತಿಯು (MPC) ಲಿಕ್ವಿಡಿಟಿ ಅಡ್ಜಸ್ಟ್‌ಮೆಂಟ್ ಫೆಸಿಲಿಟಿಯ (LAF) ಅಡಿಯಲ್ಲಿನ ನೀತಿ ರೆಪೊ ದರವನ್ನು ಎಷ್ಟು ಶೇಕಡಾವಾರು ಮಟ್ಟದಲ್ಲಿ ಬದಲಾಗದಂತೆ ಕಾಯ್ದಿರಿಸಲು ನಿರ್ಧರಿಸಿತು?

**Ans**

✗ A. 9.88%

✗ B. 2.12%

✓ C. 5.25%

✗ D. 7.26%

**Q.94** 2026ರ ಏಪ್ರಿಲ್‌ನಲ್ಲಿ ಬ್ಯಾಂಕಾಕ್‌ನಲ್ಲಿ ನಡೆದ ವಿಶ್ವ ಬಿಲ್ಲುಗಾರಿಕೆ ಪ್ಯಾರಾ ಸರಣಿ ಸ್ಪರ್ಧೆಯ ಮಹಿಳಾ ಕಾಂಪೌಂಡ್ ಫೈನಲ್‌ನಲ್ಲಿ ಶೀತಲ್ ದೇವಿಯನ್ನು ಸೋಲಿಸಿ ಚಿನ್ನದ ಪದಕವನ್ನು ಈ ಕೆಳಗಿನವರಲ್ಲಿ ಯಾರು ಗೆದ್ದರು?

**Ans**

✗ A. ಹರ್ವಿಂದರ್ ಕೌರ್

✗ B. ಪೂಜಾ ಜತ್ಯಾನ್

✗ C. ಭಾವನಾ ಶರ್ಮಾ

✓ D. ಪಾಯಲ್ ನಾಗ್

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

**Q.95** 2025 ರ ಕೊನೆಯಲ್ಲಿ ಪ್ರಕಟವಾದ ಸುದ್ದಿಯ ಪ್ರಕಾರ, ಪ್ರತಿ ಪ್ಯಾಡ್ ಗೆ ₹1 ರಂತೆ ಆಕ್ಸೋ-ಬಯೋಡಿಗ್ರೇಡಬಲ್ ಸ್ಯಾನಿಟರಿ ನ್ಯಾಪ್ಕಿನ್ ಗಳನ್ನು ಒದಗಿಸುವ ಸರ್ಕಾರದ ಯಾವ ಉಪಕ್ರಮವು ಡಿಸೆಂಬರ್ 2025 ರ ವೇಳೆಗೆ ₹ ₹96.30 ಕೋಟಿ ಮೊತ್ತದ ಸಂಚಿತ ಮಾರಾಟವನ್ನು ಮಾಡಿದೆ?

Ans
✔ A. ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ (ಪಿ.ಎಂ.ಬಿ.ಜೆ.ಪಿ) ಮೂಲಕ ಸುವಿಧಾ ನ್ಯಾಪ್ಕಿನ್ ಗಳು
✘ B. ಋತುಸ್ರಾವ ನೈರ್ಮಲ್ಯ ಯೋಜನೆಯ (ಎಂ.ಎಚ್) ಮೂಲಕ ಸುವಿಧಾ ನ್ಯಾಪ್ಕಿನ್ ಗಳು
✘ C. ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಕಾರ್ಯಕ್ರಮ (ಆರ್.ಕೆ.ಎಸ್.ಕೆ) ಮೂಲಕ ಸುವಿಧಾ ನ್ಯಾಪ್ಕಿನ್ ಗಳು
✘ D. ಬೇಟಿ ಬಚಾವೋ ಬೇಟಿ ಪಢಾವೋ (ಬಿ.ಬಿ.ಬಿ.ಪಿ) ಮೂಲಕ ಸುವಿಧಾ ನ್ಯಾಪ್ಕಿನ್ ಗಳು

**Q.96** ಜುಲೈ 2026ರಲ್ಲಿ, 'ಮಾನಸ್ ಮತ್ತು ಮಹಾಭಾರತ' ನಾಗರಿಕತಾ ಅಧ್ಯಯನಗಳ ಅಂತರರಾಷ್ಟ್ರೀಯ ಕೇಂದ್ರದ ಅಧಿಕೃತ ಉದ್ಘಾಟನೆ ಹಾಗೂ 'ಮಾನಸ್'ನ ಮೊಟ್ಟಮೊದಲ ಹಿಂದಿ ಅನುವಾದದ ಪ್ರಸ್ತುತಿಯು ಭಾರತ ಮತ್ತು ಯಾವ ದೇಶದ ನಡುವಿನ ಸಾಂಸ್ಕೃತಿಕ ಸಹಕಾರದಲ್ಲಿ ಒಂದು ಮಹತ್ವದ ಮೈಲಿಗಲ್ಲನ್ನು ಗುರುತಿಸಿತು?

Ans
✘ A. ಕಜಕಿಸ್ತಾನ್
✔ B. ಕಿರ್ಗಿಸ್ತಾನ್
✘ C. ಜಾರ್ಜಿಯಾ
✘ D. ಅರ್ಮೇನಿಯಾ

**Q.97** 2026 ರ ಫೆಬ್ರುವರಿಯಲ್ಲಿ ಮಣಿಪುರದ ಮುಖ್ಯಮಂತ್ರಿಯಾಗಿ ಯಾರು ಪ್ರಮಾಣ ವಚನ ಸ್ವೀಕರಿಸಿದರು?

Ans
✘ A. ಕೊಂಥೌಜಮ್ ಗೋವಿಂದಾಸ್ ಸಿಂಗ್
✘ B. ನೆಮ್ಚಾ ಕಿಪ್ಗೆನ್
✔ C. ಯುಮ್ನಮ್ ಖೇಮಚಂದ್ ಸಿಂಗ್
✘ D. ಎನ್. ಬಿರೇನ್ ಸಿಂಗ್

**Q.98** 2026ರ ಫೆಬ್ರುವರಿಯಲ್ಲಿ ನಡೆದ ತನ್ನ ಹಣಕಾಸು ನೀತಿ ಸಮಿತಿಯ (MPC) ಸಭೆಯಲ್ಲಿ, ಹೆಚ್ಚು ಹೊಂದಿಕೊಳ್ಳುವ ವಿಧಾನದ ಪರವಾಗಿದ್ದ ಒಬ್ಬ ಸದಸ್ಯರು ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ್ದರೂ ಸಹ, RBI ರೆಪೊ ದರವನ್ನು ಬದಲಾಯಿಸದೆ ಹಾಗೆಯೇ ಉಳಿಸಿಕೊಂಡಿತು ಮತ್ತು ತನ್ನ ನೀತಿ ನಿಲುವನ್ನು ಕೆಳಗಿನವುಗಳಲ್ಲಿ ಯಾವುದು ಎಂದು ಉಳಿಸಿಕೊಂಡಿತು?

Ans
✘ A. ಹೊಂದಿಕೊಳ್ಳುವ
✘ B. ಮಾಪನಾಂಕ ನಿರ್ಣಯಿಸಿದ ಬಿಗಿಗೊಳಿಸುವಿಕೆ
✘ C. ಪ್ರತಿಬಂಧಿತ
✔ D.
ತಟಸ್ಥ

**Q.99** 2026ರ ಮಾರ್ಚ್‌ನಲ್ಲಿ ಮಂಡಿಸಲಾದ ಕಾರ್ಪೊರೇಟ್ ಕಾನೂನುಗಳ (ತಿದ್ದುಪಡಿ) ಮಸೂದೆಯು, ಯಾವ ಎರಡು ಕಾಯ್ದೆಗಳನ್ನು ತಿದ್ದುಪಡಿ ಮಾಡುವ ಉದ್ದೇಶವನ್ನು ಹೊಂದಿದೆ?

Ans
✘ A. ಕಂಪನಿಗಳ ಕಾಯ್ದೆ, 2013, ಮತ್ತು ಭದ್ರತಾ ಪತ್ರಗಳ ಒಪ್ಪಂದಗಳ (ನಿಯಂತ್ರಣ) ಕಾಯ್ದೆ, 1956
✔ B. ಕಂಪೆನಿಗಳ ಕಾಯ್ದೆ, 2013, ಮತ್ತು ಸೀಮಿತ ಹೊಣೆಗಾರಿಕೆ ಪಾಲುದಾರಿಕೆ ಕಾಯ್ದೆ, 2008
✘ C. ಕಂಪನಿಗಳ ಕಾಯ್ದೆ, 2013, ಮತ್ತು ದಿವಾಳಿ ಮತ್ತು ದಿವಾಳಿತನ ಸಂಹಿತೆ, 2016
✘ D. ಸೀಮಿತ ಹೊಣೆಗಾರಿಕೆ ಪಾಲುದಾರಿಕೆ ಕಾಯ್ದೆ, 2008, ಮತ್ತು ಸ್ಪರ್ಧಾ ಕಾಯಿದೆ, 2002

**Q.100** 2025 ರ ನವೆಂಬರ್ ನಲ್ಲಿ ಬಿಡುಗಡೆಯಾದ ಆವರ್ತಕ ಕಾರ್ಮಿಕ ಬಲ ಸಮೀಕ್ಷೆ [Periodic Labour Force Survey (PLFS)] ದತ್ತಾಂಶದ ಪ್ರಕಾರ, 15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ವ್ಯಕ್ತಿಗಳ ನಿರುದ್ಯೋಗ ದರ (UR) ಎಷ್ಟು?

Ans
✘ A. 3.5%
✔ B. 4.7%
✘ C. 5.2%
✘ D. 6.0%

"

Get India's No 1 Vocab Preparation App for FREE : Blackbook : English Vocabulary
GET IT ON Google Play

रेलवे भर्ती बोर्ड / RAILWAY RECRUITMENT BOARD

सीईएन ०२/२०२६ - तकनीशियन ग्रेड I सिगनल और तकनीशियन ग्रेड III

CEN 02/2026 - Technician Grade I Signal and Technician Grade III

सत्यमेव जयते

| | |
|---|---|
| Test Date | 06/10/2026 |
| Test Time | 4:30 PM - 6:00 PM |
| Subject | RRB Technician Grade III |

*** Note**
**Correct Answer will carry 1 mark per Question.**
**Incorrect Answer will carry 1/3 Negative mark per Question.**

**1. Options shown in green color with a tick icon are correct.**
**2. Chosen option on the right of the question indicates the option selected by the candidate.**

Section : **Mathematics**

**Q.1** **91 ಕ್ಕೆ ಯಾವ ಕನಿಷ್ಠ ಸಂಖ್ಯೆಯನ್ನು ಕೂಡಿಸಿದರೆ ಲಬ್ಧವು 60 ರೊಂದಿಗೆ ಸಹ ಅವಿಭಾಜ್ಯ ಆಗುತ್ತದೆ?**

**Ans**
✔ A. 6
✘ B. 5
✘ C. 3
✘ D. 4

**Q.2** **₹25,000 ರ ಅಸಲನ್ನು ವಾರ್ಷಿಕ 16% ರಂತೆ ಹೂಡಿಕೆ ಮಾಡಲಾಗುತ್ತದೆ. ಕ್ರಮವಾಗಿ ವಾರ್ಷಿಕವಾಗಿ ಮತ್ತು ಅರ್ಧ ವಾರ್ಷಿಕವಾಗಿ ಚಕ್ರಬಡ್ಡಿಯನ್ನು ಲೆಕ್ಕ ಹಾಕುವ ಚಕ್ರಬಡ್ಡಿ ವಿಧಾನಗಳಲ್ಲಿ ಬಡ್ಡಿಯನ್ನು ಲೆಕ್ಕ ಹಾಕಿದರೆ, 1.5 ವರ್ಷಗಳ ನಂತರ ಗಳಿಸಿದ ಚಕ್ರಬಡ್ಡಿಗಳ ನಡುವಿನ ವ್ಯತ್ಯಾಸವೇನು?**

**Ans**
✘ A. ₹178.80
✔ B. ₹172.80
✘ C. ₹168.80
✘ D. ₹164.80

**Q.3** **ಒಂದು ವೇಳೆ k ಯ 20% ವು 10 ರ 2400% ಕ್ಕಿಂತ 10 ಕಡಿಮೆಯಿದ್ದರೆ, k ಯ ಮೌಲ್ಯವು ಇದಾಗಿದೆ:**

**Ans**
✘ A. 1130
✘ B. 1190
✘ C. 1110
✔ D. 1150

**Q.4** RST ತ್ರಿಭುಜದಲ್ಲಿ, $RS = 12$ cm, $ST = 10$ cm, $\angle RST = 50^{\circ}$ ಮತ್ತು $\angle SRT = (3y)^{\circ}$ ಆಗಿದೆ. ಮತ್ತೊಂದು ತ್ರಿಭುಜವಾದ UVW ನಲ್ಲಿ, $UV = 12$ cm, $VW = 10$ cm, $\angle UVW = 50^{\circ}$ ಮತ್ತು $\angle VUW = (2y + 20)^{\circ}$ ಆಗಿದೆ. ಹಾಗಾದರೆ $\angle VWU$ ನ ಅಳತೆ ಎಷ್ಟು?

**Ans**
✘ A. 50°
✘ B. 60°
✔ C. 70°
✘ D. 80°

Blackbook

Get India's No 1 Vocab Preparation App for FREE : **Blackbook : English Vocabulary**

GET IT ON Google Play

**Q.5** A ಮತ್ತು B ಅವರು ಒಂದು ಜಂಟಿ ಉದ್ಯಮವನ್ನು ಪ್ರಾರಂಭಿಸಲು ನಿರ್ಧರಿಸಿದರು. A ಮತ್ತು B ಅವರು ಲಾಭವನ್ನು 2:X ಅನುಪಾತದಲ್ಲಿ ಹಂಚಿಕೊಳ್ಳಲು ನಿರ್ಧರಿಸಿದರು. ಒಂದು ವೇಳೆ ವರ್ಷದ ಕೊನೆಗೆ B ಯ ಲಾಭದ ಪಾಲು ₹5976 ಮತ್ತು ಒಟ್ಟು ಲಾಭವು ₹9960 ಆಗಿದ್ದರೆ, X ನ ಮೌಲ್ಯವು ಇದಾಗಿರುತ್ತದೆ.

**Ans**
- ✗ A. 5
- ✓ B. 3
- ✗ C. 1
- ✗ D. 7

**Q.6** A ಮತ್ತು B ಕೊಳವೆಗಳು ಒಂದು ತೊಟ್ಟಿಯನ್ನು 12 ಗಂಟೆಗಳಲ್ಲಿ ತುಂಬಿದರೆ, B ಮತ್ತು C ಕೊಳವೆಗಳು ಅದನ್ನು 14 ಗಂಟೆಗಳಲ್ಲಿ ಹಾಗೂ C ಮತ್ತು A ಕೊಳವೆಗಳು ಅದನ್ನು 15 ಗಂಟೆಗಳಲ್ಲಿ ತುಂಬಬಲ್ಲವು. ಎಲ್ಲಾ ಮೂರು ಕೊಳವೆಗಳನ್ನು 6 ಗಂಟೆಗಳ ಕಾಲ ಒಟ್ಟಿಗೆ ತೆರೆದಿಡಲಾಗುತ್ತದೆ, ನಂತರ B ಮತ್ತು C ಕೊಳವೆಗಳನ್ನು ಮುಚ್ಚಲಾಗುತ್ತದೆ ಹಾಗೂ A ಕೊಳವೆ ಮಾತ್ರವೇ ನೀರು ತುಂಬುವುದನ್ನು ಮುಂದುವರಿಸುತ್ತದೆ. ತೊಟ್ಟಿಯ ಉಳಿದ ಭಾಗವನ್ನು ತುಂಬಲು A ಕೊಳವೆಯು ತೆಗೆದುಕೊಳ್ಳುವ ಸಮಯವನ್ನು ಕಂಡುಹಿಡಿಯಿರಿ.

**Ans**
- ✗ A. $6\frac{3}{5}$ ಗಂಟೆಗಳು
- ✓ B. $8\frac{6}{11}$ ಗಂಟೆಗಳು
- ✗ C. $9\frac{5}{13}$ ಗಂಟೆಗಳು
- ✗ D. $7\frac{4}{9}$ ಗಂಟೆಗಳು

**Q.7** ಒಬ್ಬ ವ್ಯಕ್ತಿಯು ₹57500 ಮೊತ್ತವನ್ನು ವಾರ್ಷಿಕ 6% ಸರಳ ಬಡ್ಡಿ ದರದಲ್ಲಿ 3 ವರ್ಷಗಳ ಅವಧಿಗೆ ಹೂಡಿಕೆ ಮಾಡಿದ್ದಾನೆ. ಹಾಗಾದರೆ 3 ವರ್ಷಗಳ ನಂತರ ಅವನು ಪಡೆಯುವ ಮೊತ್ತವನ್ನು (₹ ಗಳಲ್ಲಿ) ಕಂಡುಹಿಡಿಯಿರಿ.

**Ans**
- ✗ A. 68850
- ✓ B. 67850
- ✗ C. 11350
- ✗ D. 10350

**Q.8** ಒಂದು ಅಂಗಡಿಯು " 5 ಖರೀದಿಸಿದರೆ 2a ಉಚಿತ" ಎಂಬ ಯೋಜನೆಯ ಜೊತೆಗೆ 10% ವ್ಯಾಪಾರ ರಿಯಾಯಿತಿ ನೀಡುತ್ತಿದೆ. ಒಂದು ವೇಳೆ ಗ್ರಾಹಕನಿಗೆ ನೀಡಲಾದ ಪರಿಣಾಮಕಾರಿ ರಿಯಾಯಿತಿ 50% ಆಗಿದ್ದರೆ, a ಯ ಮೌಲ್ಯ ಎಷ್ಟು?

**Ans**
- ✗ A. 4
- ✓ B. 2
- ✗ C. 3
- ✗ D. 1

**Q.9** ವಾರ್ಷಿಕ 20% ದರದಲ್ಲಿ ₹2,000 ಮೊತ್ತದ ಮೇಲೆ 18 ತಿಂಗಳ ಅವಧಿಗೆ ಸಿಗುವ ಚಕ್ರಬಡ್ಡಿಯನ್ನು (ಅರ್ಧ ವಾರ್ಷಿಕವಾಗಿ ಚಕ್ರ ಬಡ್ಡಿಯನ್ನು ಲೆಕ್ಕ ಹಾಕುವ ವಿಧಾನದಲ್ಲಿ) ಕಂಡುಹಿಡಿಯಿರಿ.

**Ans**
- ✗ A. ₹670
- ✓ B. ₹662
- ✗ C. ₹679
- ✗ D. ₹650

**Q.10** ಒಂದು ಲಾಜಿಸ್ಟಿಕ್ಸ್ ನೆಟ್ವರ್ಕ್‌ನಲ್ಲಿ, ಕ್ರಮವಾಗಿ X ಹಬ್ ಮತ್ತು Y ಹಬ್ ವಿತರಿಸಿದ ಪಾರ್ಸೆಲ್ ಗಳ ಸಂಖ್ಯೆಗಳು 13 : 21 ಅನುಪಾತದಲ್ಲಿವೆ. X ಹಬ್ 160 ಹೆಚ್ಚು ಪಾರ್ಸೆಲ್ ಗಳನ್ನು ತಲುಪಿಸಿದರೆ ಮತ್ತು Y ಹಬ್ 240 ಹೆಚ್ಚು ಪಾರ್ಸೆಲ್ ಗಳನ್ನು ತಲುಪಿಸಿದರೆ, ಆ ಅನುಪಾತವು 15 : 23 ಆಗುತ್ತದೆ. ಹಾಗಾದರೆ X ಹಬ್ ಮೂಲತಃ ಎಷ್ಟು ಪಾರ್ಸೆಲ್ ಗಳನ್ನು ತಲುಪಿಸಿತ್ತು?

**Ans**
- ✗ A. 55
- ✗ B. 85
- ✗ C. 75
- ✓ D. 65

Blackbook

Get India's No 1 Vocab Preparation App for FREE : **Blackbook : English Vocabulary** GET IT ON Google Play

**Q.11** ಇಂದಿನಿಂದ ನಾಲ್ಕು ವರ್ಷಗಳ ಹಿಂದೆ, ಅಮನ್ ಅವರಿಗೆ ಚಮನ್ ಅವರ 9 ಪಟ್ಟು ವಯಸ್ಸಾಗಿತ್ತು. ಇಂದಿನಿಂದ 4 ವರ್ಷಗಳ ನಂತರ, ಅವರಿಗೆ ಚಮನ್ ಅವರ ಅಂದಿನ ವಯಸ್ಸಿನ 5 ಪಟ್ಟು ವಯಸ್ಸಾಗುತ್ತದೆ. ಹಾಗಾದರೆ ಅಮನ್ ಅವರ ಪ್ರಸ್ತುತ ವಯಸ್ಸು (ವರ್ಷಗಳಲ್ಲಿ) ಎಷ್ಟು?

**Ans**

- ✗ A. 77
- ✗ B. 79
- ✗ C. 82
- ✓ D. 76

**Q.12** ಒಂದು ಮುಚ್ಚಿದ ಘನಾಭದ ಉದ್ದ, ಅಗಲ ಮತ್ತು ಎತ್ತರಗಳ ನಡುವಿನ ಅನುಪಾತವನ್ನು 4 : 3 : 2 ಎಂದು ನೀಡಲಾಗಿದೆ ಮತ್ತು ಈ ಘನಾಭದ ಎತ್ತರವನ್ನು 14 cm ಎಂದು ನೀಡಲಾಗಿದೆ. ಹಾಗಾದರೆ ಘನಾಭದ ಒಟ್ಟು ಮೇಲ್ಮೈ ವಿಸ್ತೀರ್ಣವನ್ನು ($cm^2$ ಗಳಲ್ಲಿ) ಕಂಡುಹಿಡಿಯಿರಿ.

**Ans**

- ✓ A. 2548
- ✗ B. 2528
- ✗ C. 2498
- ✗ D. 2598

**Q.13** ಒಂದು ಶಾಲೆಯು ವಿಜ್ಞಾನದ ಪ್ರದರ್ಶನವನ್ನು ಆಯೋಜಿಸಿದ್ದು, ಇಲ್ಲಿ ಪ್ರಾಜೆಕ್ಟ್ ಗಳನ್ನು 50 ಅಂಕಗಳಲ್ಲಿ ಮೌಲ್ಯಮಾಪನ ಮಾಡಲಾಗುತ್ತದೆ. ಭೌತಶಾಸ್ತ್ರದ ಪ್ರಾಜೆಕ್ಟ್ ಗಳ ಸರಾಸರಿ ಅಂಕವು 42 ಆಗಿದ್ದರೆ, ಕಂಪ್ಯೂಟರ್ ವಿಜ್ಞಾನದ ಪ್ರಾಜೆಕ್ಟ್ ಗಳ ಸರಾಸರಿ ಅಂಕವು 46 ಆಗಿದೆ. ಒಂದು ವೇಳೆ ಎಲ್ಲಾ 40 ಪ್ರಾಜೆಕ್ಟ್ ಗಳ ಒಟ್ಟಾರೆ ಸರಾಸರಿ ಅಂಕವು 44.5 ಆಗಿದ್ದರೆ, ಈ ಪ್ರದರ್ಶನದಲ್ಲಿ ಪ್ರಸ್ತುತಪಡಿಸಲಾದ ಭೌತಶಾಸ್ತ್ರದ ಪ್ರಾಜೆಕ್ಟ್ ಗಳ ಸಂಖ್ಯೆಯನ್ನು ಲೆಕ್ಕ ಹಾಕಿರಿ.

**Ans**

- ✓ A. 15
- ✗ B. 12
- ✗ C. 18
- ✗ D. 14

**Q.14** ಅಂಗಡಿಯವನು ಅಂಗಿಯೊಂದನ್ನು ₹3600 ಕ್ಕೆ ಮಾರಾಟ ಮಾಡಿ 20% ಲಾಭ ಗಳಿಸಿದ್ದಾನೆ. ಹಾಗಾದರೆ ಆ ಅಂಗಿಯ ಅಸಲು ಬೆಲೆ ಎಷ್ಟು?

**Ans**

- ✗ A. ₹2800
- ✗ B. ₹2880
- ✗ C. ₹3200
- ✓ D. ₹3000

**Q.15** ಜಾಹ್ನವಿ ಅವರು ಒಂದು ಆಟಿಕೆಯನ್ನು ₹374ಕ್ಕೆ ಖರೀದಿಸಿ, ₹11 ವೆಚ್ಚದಲ್ಲಿ ಅದನ್ನು ಅಲಂಕರಿಸಿ, ₹140ಕ್ಕೆ ಮಾರಾಟ ಮಾಡುತ್ತಾರೆ. ಹಾಗಾದರೆ, ಅವರಿಗೆ ಉಂಟಾದ ಶೇಕಡಾವಾರು ನಷ್ಟ ಅಥವಾ ಶೇಕಡಾವಾರು ಲಾಭವನ್ನು ಕಂಡುಹಿಡಿಯಿರಿ.

**Ans**

- ✗ A. $700\%$ ನಷ್ಟ
- ✗ B. $\frac{700}{11}\%$ ಲಾಭ
- ✗ C. $\frac{710}{11}\%$ ಲಾಭ
- ✓ D. $\frac{700}{11}\%$ ನಷ್ಟ

**Q.16** ತಲಾ 7 cm ತ್ರಿಜ್ಯದ ಮೂರು ಘನ ಗೋಳಗಳನ್ನು ಕರಗಿಸಿ 7 cm ತ್ರಿಜ್ಯದ ಒಂದು ಸಿಲಿಂಡರ್ ಅನ್ನು ರಚಿಸಲಾಗುತ್ತದೆ. ಹಾಗಾದರೆ ಆ ಸಿಲಿಂಡರ್ ನ ಎತ್ತರವೆಷ್ಟು?
($\pi = \frac{22}{7}$ ಬಳಸಿ)

**Ans**

- ✗ A. 30 cm
- ✗ B. 34 cm
- ✓ C. 28 cm
- ✗ D. 32 cm

Blackbook

Get India's No 1 Vocab Preparation App for FREE : **Blackbook : English Vocabulary** GET IT ON Google Play

**Q.17** 1452 m ಉದ್ದದ ವೃತ್ತಾಕಾರದ ಪಥದಲ್ಲಿ, ರಾಮನ್ ಒಂದು ಸುತ್ತನ್ನು 33 ಸೆಕೆಂಡುಗಳಲ್ಲಿ ಮತ್ತು ಮೋಹನ್ ಒಂದು ಸುತ್ತನ್ನು 66 ಸೆಕೆಂಡುಗಳಲ್ಲಿ ಪೂರ್ಣಗೊಳಿಸುತ್ತಾರೆ. ಹಾಗಾದರೆ, ಅವರಿಬ್ಬರೂ ಒಂದೇ ದಿಕ್ಕಿನಲ್ಲಿ ಓಡುತ್ತಿದ್ದರೆ, ಆ ಪರಿಧಿಯಲ್ಲಿ ಅವರು ಸಂಧಿಸುವ ವಿಭಿನ್ನ ಬಿಂದುಗಳು ಎಷ್ಟು ಇವೆ?

**Ans**
- ✗ A. 5
- ✗ B. 6
- ✗ C. 4
- ✓ D. 1

**Q.18** 6-ಅಂಕಿಯ A678B3 ಎಂಬ ಸಂಖ್ಯೆಯನ್ನು 3 ರಿಂದ ನಿಶ್ಶೇಷವಾಗಿ ಭಾಗಿಸಬಹುದಾದರೆ, (A+B) ಯಕನಿಷ್ಠ ಸಂಭವನೀಯ ಮೌಲ್ಯವನ್ನು ಕಂಡುಹಿಡಿಯಿರಿ.

**Ans**
- ✗ A. 7
- ✗ B. 1
- ✓ C. 3
- ✗ D. 4

**Q.19** ಕೆಳಗಿನ ಗುಂಪಿನ ಆವರ್ತನ ವಿತರಣೆಯ ರೂಢಿಬೆಲೆ ವರ್ಗ 30–40, ಮತ್ತು ರೂಢಿಬೆಲೆ 35 ಆಗಿದೆ.

| ವರ್ಗಾಂತರ | 10–20 | 20–30 | 30–40 | 40–50 | 50–60 |
|---|---|---|---|---|---|
| ಆವರ್ತನ | 4 | x | 16 | y | 8 |

ಒಂದು ವೇಳೆ ಒಟ್ಟು ಆವರ್ತನ 50, ಆಗಿದ್ದರೆ, ಕ್ರಮವಾಗಿ x ಮತ್ತು y ಗಳ ಮೌಲ್ಯಗಳು ಎಷ್ಟು?

**Ans**
- ✗ A. 12 ಮತ್ತು 10
- ✓ B. 11 ಮತ್ತು 11
- ✗ C. 8 ಮತ್ತು 14
- ✗ D. 14 ಮತ್ತು 8

**Q.20** ಕಾರು ಡೀಲರ್ ಒಬ್ಬರು ಮಾರ್ಚ್ ತಿಂಗಳಿನಲ್ಲಿ, ಶನಿವಾರ ಮತ್ತು ಭಾನುವಾರಗಳನ್ನು ಹೊರತುಪಡಿಸಿ, ಪ್ರತಿದಿನ ಮಾರಾಟ ಮಾಡುವ ಕಾರುಗಳ ಸರಾಸರಿ ಸಂಖ್ಯೆ 177 ಆಗಿದೆ. ಭಾನುವಾರಗಳಂದು ಮಾರಾಟವಾಗುವ ಕಾರುಗಳ ಸರಾಸರಿ ಸಂಖ್ಯೆ 151 ಆಗಿದೆ. ಆ ತಿಂಗಳ ಮೊದಲ ಶನಿವಾರವು ಮಾರ್ಚ್ 3 ರಂದು ಬರುತ್ತದೆ ಮತ್ತು ಇಡೀ ತಿಂಗಳ ಪ್ರತಿದಿನದ ಸರಾಸರಿ ಮಾರಾಟ 148 ಆಗಿದೆ. ಹಾಗಾದರೆ ಶನಿವಾರಗಳಂದು ಪ್ರತಿದಿನ ಮಾರಾಟವಾದ ಕಾರುಗಳ ಸರಾಸರಿ ಸಂಖ್ಯೆ ಎಷ್ಟು?

**Ans**
- ✗ A. 19
- ✗ B. 17
- ✗ C. 23
- ✓ D. 18

**Q.21** ರಿಯಾಳ ವಯಸ್ಸು ಮತ್ತು ಆಯುಷಿಯ ವಯಸ್ಸಿನ ಎರಡು ಪಟ್ಟು ವಯಸ್ಸಿನ ಮೊತ್ತವು 29 ವರ್ಷಗಳಾಗಿವೆ. ರಿಯಾಳ ತಂದೆಯ ವಯಸ್ಸು ರಿಯಾಳ ವಯಸ್ಸಿನ ಐದು ಪಟ್ಟು ಆಗಿದೆ ಮತ್ತು ಆಯುಷಿಯ ಸಹೋದರನು ಆಯುಷಿಗಿಂತ 2 ವರ್ಷ ದೊಡ್ಡವನಾಗಿದ್ದಾನೆ. ರಿಯಾಳ ತಂದೆ ಮತ್ತು ಆಯುಷಿಯ ಸಹೋದರನ ವಯಸ್ಸುಗಳ ಮೊತ್ತವು 48 ವರ್ಷಗಳಾಗಿವೆ. ಹಾಗಾದರೆ, ಆಯುಷಿ ಮತ್ತು ರಿಯಾಳ ವಯಸ್ಸುಗಳ ಮೊತ್ತವನ್ನು (ವರ್ಷಗಳಲ್ಲಿ) ಕಂಡುಹಿಡಿಯಿರಿ.

**Ans**
- ✗ A. 23
- ✗ B. 21
- ✓ C. 18
- ✗ D. 14

**Q.22** 1.5 m ಎತ್ತರದ ಒಬ್ಬ ಹುಡುಗನಿಂದ 2 m ನೆರಳು ಮೂಡುತ್ತದೆ. ಅದೇ ಸಮಯದಲ್ಲಿ ಒಂದು ಕಂಬದಿಂದ 12 m ನೆರಳು ಮೂಡುತ್ತದೆ, ಹಾಗಾದರೆ ಕಂಬದ ಎತ್ತರ ಎಷ್ಟು?

**Ans**
- ✗ A. 15 m
- ✓ B. 9 m
- ✗ C. 6 m
- ✗ D. 12 m

Blackbook

Get India's No 1 Vocab Preparation App for FREE : Blackbook : English Vocabulary
GET IT ON Google Play

Q.23 ಒಂದುವೇಳೆ $\frac{1 + \cos A}{1 - \cos A} = \left(\frac{m}{n}\right)^2$ ಆಗಿದ್ದರೆ, $\operatorname{cosec}A - \cot A$ ನ ಮೌಲ್ಯವನ್ನು ಕಂಡುಹಿಡಿಯಿರಿ.

Ans
- ✗ A. $m + n$
- ✗ B. $m - n$
- ✗ C. $mn$
- ✓ D. $\frac{n}{m}$

Q.24 ಒಬ್ಬ ವ್ಯಕ್ತಿಯು X ನಿಮಿಷಗಳಲ್ಲಿ A ಸ್ಥಳದಿಂದ B ಸ್ಥಳಕ್ಕೆ 10 m/s ವೇಗದಲ್ಲಿ ಪ್ರಯಾಣಿಸುತ್ತಾರೆ. ನಂತರ ಅವರು Y ನಿಮಿಷಗಳಲ್ಲಿ B ಸ್ಥಳದಿಂದ C ಸ್ಥಳಕ್ಕೆ 45 km/hr ವೇಗದಲ್ಲಿ ಪ್ರಯಾಣಿಸುತ್ತಾರೆ. ಒಂದು ವೇಳೆ X ಮತ್ತು Y ಸಮಯಗಳ ಅನುಪಾತವು 2:3 ಆಗಿದ್ದರೆ, ಅವರ ಇಡೀ ಪ್ರಯಾಣದ ಸರಾಸರಿ ವೇಗ ಇಷ್ಟಿತ್ತು:

Ans
- ✗ A. 43.5 km/hr
- ✗ B. 40 km/hr
- ✗ C. 42 km/hr
- ✓ D. 41.4 km/hr

Q.25 A, B ಮತ್ತು C ಎಂಬವರು ಒಬ್ಬೊಬ್ಬರಾಗಿ ಒಂದು ಕೆಲಸವನ್ನು ಕ್ರಮವಾಗಿ 12 ದಿನಗಳು, 18 ದಿನಗಳು ಮತ್ತು 24 ದಿನಗಳಲ್ಲಿ ಪೂರ್ಣಗೊಳಿಸಬಲ್ಲರು. ಒಂದು ವೇಳೆ ಅವರೆಲ್ಲರೂ ಒಟ್ಟಾಗಿ 4 ದಿನಗಳ ಕಾಲ ಕೆಲಸ ಮಾಡಿದರೆ, ಆ ಯೋಜನೆಯ ಎಷ್ಟು ಭಾಗವು ಅಪೂರ್ಣವಾಗಿ ಉಳಿಯುತ್ತದೆ?

Ans
- ✗ A. $\frac{13}{18}$
- ✗ B. $\frac{11}{18}$
- ✗ C. $\frac{1}{18}$
- ✓ D. $\frac{5}{18}$

Section : **General Intelligence and Reasoning**

Q.26 ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'fan dust mop' ಎಂಬುದನ್ನು ' cs mz so' ಎಂದು ಮತ್ತು 'fog mop tune' ಎಂಬುದನ್ನು 'mz gi oz' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಲಾದ ಸಂಕೇತ ಭಾಷೆಯಲ್ಲಿ 'mop' ಅನ್ನು ಹೇಗೆ ಸಂಕೇತಿಸಬಹುದು?

Ans
- ✗ A. so
- ✓ B. mz
- ✗ C. cs
- ✗ D. gi

Q.27 ಇಂಗ್ಲಿಷ್ ವರ್ಣಮಾಲೆಯ ಕ್ರಮವನ್ನು ಆಧರಿಸಿ ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು, ಒಂದೇ ಗುಂಪಿಗೆ ಸೇರುತ್ತವೆ. ಯಾವ ಅಕ್ಷರ-ಗುಚ್ಛವು ಆ ಗುಂಪಿಗೆ ಸೇರುವುದಿಲ್ಲ?
(ಸೂಚನೆ: ಗುಂಪಿಗೆ ಸೇರದ ಅಕ್ಷರ-ಗುಚ್ಛವು, ಅದರಲ್ಲಿರುವ ವ್ಯಂಜನಗಳು/ಸ್ವರಾಕ್ಷರಗಳು ಅಥವಾ ಅವುಗಳ ಸ್ಥಾನವನ್ನು ಆಧರಿಸಿ ಗುಂಪಿಗೆ ಸೇರದ್ದು ಅಲ್ಲ.)

Ans
- ✓ A. GFI
- ✗ B. XVZ
- ✗ C. HFJ
- ✗ D. IGK

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

**Q.28** A, B, C, D, E ಮತ್ತು F ಎಂಬ ಎಲ್ಲರೂ ಒಂದೇ ಕಟ್ಟಡದ ಆರು ಬೇರೆ ಬೇರೆ ಮಹಡಿಗಳಲ್ಲಿ ವಾಸಿಸುತ್ತಿದ್ದಾರೆ. ಕಟ್ಟಡದ ಅತ್ಯಂತ ಕೆಳಗಿನ ಮಹಡಿಗೆ 1 ಎಂದು ಸಂಖ್ಯೆ, ಅದರ ಮೇಲಿನ ಮಹಡಿಗೆ 2ನೇ ಸಂಖ್ಯೆ ಎಂದು, ಮತ್ತು ಹೀಗೆಯೇ ಮುಂದುವರೆದು ಅತ್ಯಂತ ಮೇಲಿನ ಮಹಡಿಗೆ 6ನೇ ಸಂಖ್ಯೆ ನೀಡಲಾಗಿದೆ.
D ಅವರು ಬೆಸ ಸಂಖ್ಯೆಯ ಮಹಡಿಯಲ್ಲಿ ವಾಸಿಸುತ್ತಿದ್ದಾರೆ, ಆದರೆ ಅದು 3ನೇ ಮಹಡಿಯಲ್ಲಿ ಅಲ್ಲ. A ಮತ್ತು D ಅವರು ವಾಸಿಸುತ್ತಿರುವ ಮಹಡಿಗಳ ಸಂಖ್ಯೆಗಳ ಮೊತ್ತವು 4 ಆಗಿದೆ. C ಮತ್ತು E ಅವರ ನಡುವೆ ಕೇವಲ 3 ಜನರು ವಾಸಿಸುತ್ತಿದ್ದಾರೆ. F ಅವರು B ಅವರ ತಕ್ಷಣದ ಮೇಲಿನ ಮಹಡಿಯಲ್ಲಿ ವಾಸಿಸುತ್ತಿದ್ದಾರೆ. B ಮತ್ತು C ಅವರು ವಾಸಿಸುತ್ತಿರುವ ಮಹಡಿಗಳ ಸಂಖ್ಯೆಗಳ ಮೊತ್ತವು 10 ಆಗಿದೆ. ಹಾಗಾದರೆ A ಮತ್ತು E ಅವರು ವಾಸಿಸುತ್ತಿರುವ ಮಹಡಿಗಳ ಸಂಖ್ಯೆಗಳ ಮೊತ್ತ ಎಷ್ಟು?

**Ans**
- ✗ A. 7
- ✓ B. 5
- ✗ C. 6
- ✗ D. 8

**Q.29** JOURNEY ಎಂಬ ಪದದ ಎಲ್ಲಾ ಅಕ್ಷರಗಳನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಜೋಡಿಸಿದರೆ, ಹೊಸ ಜೋಡಣೆಯಲ್ಲಿ ಬರುವ ಮೊದಲನೇ ಮತ್ತು ಕೊನೆಯ ಅಕ್ಷರದ ನಡುವಿನ ವರ್ಣಮಾಲೆಯ ಸ್ಥಾನಗಳ ನಡುವಿನ (ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ) ವ್ಯತ್ಯಾಸ ಎಷ್ಟು?

**Ans**
- ✗ A. 10
- ✓ B. 20
- ✗ C. 15
- ✗ D. 5

**Q.30** 3147958 ಎಂಬ ಸಂಖ್ಯೆಯ ಪ್ರತಿಯೊಂದು ಅಂಕಿಗಳನ್ನೂ ಎಡದಿಂದ ಬಲಕ್ಕೆ ಏರಿಕೆಯ ಕ್ರಮದಲ್ಲಿ ಜೋಡಿಸಲಾಗಿದೆ. ಮೂಲ ಸಂಖ್ಯೆಗೆ ಹೋಲಿಸಿದರೆ ಎಷ್ಟು ಅಂಕಿಗಳ ಸ್ಥಾನ ಬದಲಾಗದೆ ಹಾಗೇ ಉಳಿಯುವುದು?

**Ans**
- ✓ A. ಒಂದು
- ✗ B. ಎರಡು
- ✗ C. ಮೂರು
- ✗ D. ಮೂರಕ್ಕಿಂತ ಹೆಚ್ಚು

**Q.31** ಒಂದುವೇಳೆ 'A' ಎಂದರೆ '÷', 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '−' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಸಂಖ್ಯೆ ಬರುತ್ತದೆ?

12 B 3 D 24 A 4 C 2 = ? D 8

**Ans**
- ✗ A. 30
- ✗ B. 60
- ✗ C. 50
- ✓ D. 40

**Q.32** ಈ ಕೆಳಗಿನ ಅಕ್ಷರ, ಚಿಹ್ನೆಯ ಸರಣಿಯನ್ನು ಅವಲೋಕಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ.

(ಎಡ) F & I T @ J Y C * A # U K L P $ B M (ಬಲ)

ಈ ಸರಣಿಯಿಂದ ಎಲ್ಲಾ ಚಿಹ್ನೆಗಳನ್ನು ತೆಗೆದುಹಾಕಿದರೆ, ಬಲದಿಂದ ಆರನೆಯ ಸ್ಥಾನದಲ್ಲಿ ಈ ಕೆಳಗಿನವುಗಳಲ್ಲಿ ಯಾವುದಿರುತ್ತದೆ?

**Ans**
- ✗ A. P
- ✗ B. B
- ✗ C. K
- ✓ D. U

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

**Q.33** ಈ ಕೆಳಗೆ ಒಂದು ಪ್ರಶ್ನೆಯನ್ನು ನೀಡಲಾಗಿದೆ ಮತ್ತು ಅದರ ನಂತರ (I) ಮತ್ತು (II) ಎಂದು ಸಂಖ್ಯೆಗಳನ್ನು ನೀಡಿದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ನೀವು ನಿರ್ಧರಿಸಬೇಕು. ಈ ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಕೇಳಿರುವ ಪ್ರಶ್ನೆಗೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ.

ಪ್ರಶ್ನೆ:
W, O, K, G ಮತ್ತು Y ಎಂಬ 5 ಕಂಬಗಳಿದ್ದು, ಪ್ರತಿಯೊಂದು ವಿಭಿನ್ನ ಎತ್ತರವನ್ನು ಹೊಂದಿವೆ. ಹಾಗಾದರೆ ಅತಿ ಹೆಚ್ಚು ಎತ್ತರವನ್ನು ಹೊಂದಿರುವ ಕಂಬ ಯಾವುದು?

ಹೇಳಿಕೆಗಳು:
I. K ಕಂಬವು ಕೇವಲ ಒಂದು ಕಂಬಕ್ಕಿಂತ ಎತ್ತರವಾಗಿದೆ. G ಕಂಬವು O ಕಂಬಕ್ಕಿಂತ ಕಡಿಮೆ ಎತ್ತರವನ್ನು ಹೊಂದಿದೆ ಆದರೆ W ಕಂಬಕ್ಕಿಂತ ಎತ್ತರವಾಗಿದೆ.
II. G ಕಂಬವು Y ಕಂಬಕ್ಕಿಂತ ಎತ್ತರವಾಗಿದೆ.

Ans
- ✗ A. ಪ್ರಶ್ನೆಗೆ ಉತ್ತರಿಸಲು ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ, ಅದೇವೇಳೆ ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ
- ✗ B. ಹೇಳಿಕೆ I ಮತ್ತು II ರಲ್ಲಿರುವ ಒಟ್ಟುಗೂಡಿಸಿದ ಮಾಹಿತಿಯು ಪ್ರಶ್ನೆಗೆ ಉತ್ತರಿಸಲು ಸಾಕಾಗುವುದಿಲ್ಲ
- ✗ C. ಪ್ರಶ್ನೆಗೆ ಉತ್ತರಿಸಲು ಹೇಳಿಕೆ II ರಲ್ಲಿರುವ ಮಾಹಿತಿಯೊಂದೇ ಸಾಕಾಗುತ್ತದೆ. ಅದೇವೇಳೆ ಹೇಳಿಕೆ I ರಲ್ಲಿರುವ ಮಾಹಿತಿಯೊಂದೇ ಸಾಕಾಗುವುದಿಲ್ಲ
- ✓ D. ಪ್ರಶ್ನೆಗೆ ಉತ್ತರಿಸಲು I ಮತ್ತು II ಎರಡೂ ಹೇಳಿಕೆಗಳು ಒಟ್ಟುಗೂಡಿಸಿದ ಮಾಹಿತಿಯು (ಮತ್ತು ಕೇವಲ ಹೇಳಿಕೆ I ಅಥವಾ ಕೇವಲ ಹೇಳಿಕೆ II ಅಲ್ಲ) ಸಾಕಾಗುತ್ತದೆ

**Q.34** ಒಂದು ವೇಳೆ 'A' ಎಂದರೆ '÷' , 'B' ಎಂದರೆ '×', 'C' ಎಂದರೆ '+' ಮತ್ತು 'D' ಎಂದರೆ '-' ಆಗಿದ್ದರೆ, ಈ ಕೆಳಗಿನ ಸಮೀಕರಣದಲ್ಲಿನ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನಕ್ಕೆ ಯಾವ ಆಯ್ಕೆಯು ಸರಿಹೊಂದುತ್ತದೆ?

15 B 3 D 35 A 5 C 12 = ?

Ans
- ✗ A. 57
- ✗ B. 52
- ✗ C. 45
- ✓ D. 50

**Q.35** ಈ ಕೆಳಗಿನ ಅಕ್ಷರ ಸರಣಿಯನ್ನು ಪರಿಶೀಲಿಸಿ ಮತ್ತು ಪ್ರಶ್ನೆಗೆ ಉತ್ತರಿಸಿ. ಎಣಿಕೆಯನ್ನು ಎಡದಿಂದ ಬಲಕ್ಕೆ ಮಾತ್ರ ಮಾಡಬೇಕು.

(ಎಡ) H Y B V F B J I N U H O V E X G V C T E R K B M (ಬಲ)

ಪ್ರತಿಯೊಂದೂ ತನ್ನ ತಕ್ಷಣದ ಹಿಂದೆಯೂ ಸ್ವರಾಕ್ಷರವನ್ನು ಮತ್ತು ತನ್ನ ತಕ್ಷಣದ ಮುಂದೆಯೂ ಸ್ವರಾಕ್ಷರವನ್ನು ಹೊಂದಿರುವಂತಹ ಎಷ್ಟು ವ್ಯಂಜನಾಕ್ಷರಗಳು ಇಲ್ಲಿವೆ?

Ans
- ✗ A. ಎರಡು
- ✓ B. ಮೂರು
- ✗ C. ಒಂದು
- ✗ D. ಯಾವುದೂ ಇಲ್ಲ

**Q.36** ಒಂದು ನಿರ್ದಿಷ್ಟ ಸಂಕೇತ ಭಾಷೆಯಲ್ಲಿ, 'SHOE' ಎಂಬುದನ್ನು '2516' ಎಂದು ಸಂಕೇತಿಸಲಾಗಿದೆ ಮತ್ತು 'ROSE' ಎಂಬುದನ್ನು '7126' ಎಂದು ಸಂಕೇತಿಸಲಾಗಿದೆ. ಹಾಗಾದರೆ ನೀಡಿರುವ ಸಂಕೇತ ಭಾಷೆಯಲ್ಲಿ 'R' ಎಂಬುದರ ಸಂಕೇತ ಯಾವುದು?

Ans
- ✗ A. 6
- ✗ B. 1
- ✓ C. 7
- ✗ D. 5

**Q.37** ಕೆಳಗೆ ನೀಡಿರುವ ಎರಡು ಜೋಡಿಗಳು ಅನುಸರಿಸುತ್ತಿರುವ ನಮೂನೆಯನ್ನೇ ಅನುಸರಿಸುವ ಜೋಡಿಯನ್ನು ಆರಿಸಿರಿ. ಎರಡೂ ಜೋಡಿಗಳು ಒಂದೇ ನಮೂನೆಯನ್ನು ಅನುಸರಿಸುತ್ತವೆ.
ACB–CED
WYX–YAZ

Ans
- ✓ A. HJI–JLK
- ✗ B. HIG–JLK
- ✗ C. HIG–IKJ
- ✗ D. HJI–ILJ

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

Q.38 ಆಂಗ್ಲ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ಈ ಕೆಳಗಿನ ನಾಲ್ಕರಲ್ಲಿ ಮೂರು ಅಕ್ಷರ-ಗುಚ್ಛ ಜೋಡಿಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಸದೃಶವಾಗಿದ್ದು, ಒಂದೇ ಗುಂಪಿಗೆ ಸೇರುತ್ತವೆ. ಯಾವ ಅಕ್ಷರ-ಗುಚ್ಛ ಜೋಡಿಯು ಆ ಗುಂಪಿಗೆ ಸೇರುವುದಿಲ್ಲ?
(ಸೂಚನೆ: ಗುಂಪಿಗೆ ಸೇರದ ಅಕ್ಷರ ಗುಚ್ಛವು ವ್ಯಂಜನಗಳು/ಸ್ವರಗಳ ಸಂಖ್ಯೆ ಅಥವಾ ಅಕ್ಷರ-ಗುಚ್ಛದಲ್ಲಿನ ಅವುಗಳ ಸ್ಥಾನವನ್ನು ಆಧರಿಸಿರುವುದಿಲ್ಲ.)

Ans
- ✗ A. EF - HJ
- ✓ B. UV - WX
- ✗ C. PQ - SU
- ✗ D. LM - OQ

Q.39 ಒಂದು ವೇಳೆ HISTORY ಎಂಬ ಪದದಲ್ಲಿನ ಪ್ರತಿಯೊಂದು ಅಕ್ಷರವನ್ನು ಇಂಗ್ಲಿಷ್ ವರ್ಣಮಾಲೆಯ ಅನುಕ್ರಮದಲ್ಲಿ ಜೋಡಿಸಿದರೆ ಎಷ್ಟು ಅಕ್ಷರಗಳ ಸ್ಥಾನವು ಬದಲಾಗದೆ ಹಾಗೆಯೇ ಉಳಿಯುತ್ತದೆ?

Ans
- ✗ A. ಯಾವುದೂ ಇಲ್ಲ
- ✗ B. ಎರಡು
- ✓ C. ಮೂರು
- ✗ D. ಒಂದು

Q.40 ಈ ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಸ್ಥಾನದಲ್ಲಿ ಯಾವ ಆಯ್ಕೆ ಬರಬೇಕು?

64 32 16 8 4 ?

Ans
- ✓ A. 2
- ✗ B. 4
- ✗ C. 3
- ✗ D. 1

Q.41 M, N, O, P, Q, R ಮತ್ತು S ಎಂಬ ಏಳು ಪೆಟ್ಟಿಗೆಗಳನ್ನು ಒಂದರ ಮೇಲೊಂದರಂತೆ ಇಡಲಾಗಿದೆ. ಆದರೆ ಅವು ಇದೇ ಕ್ರಮದಲ್ಲಿ ಇರಬೇಕೆಂದಿಲ್ಲ. Q ಮತ್ತು O ನಡುವೆ ಎರಡು ಪೆಟ್ಟಿಗೆಗಳನ್ನು ಮಾತ್ರ ಇಡಲಾಗಿದೆ. P ಗಿಂತ ಮೇಲಿನ ಸ್ಥಾನದಲ್ಲಿ N ಪೆಟ್ಟಿಗೆಯನ್ನು ಮಾತ್ರ ಇಡಲಾಗಿದೆ. O ಗಿಂತ ಕೆಳಗಿನ ಸ್ಥಾನದಲ್ಲಿ ಯಾವುದೇ ಪೆಟ್ಟಿಗೆಯನ್ನು ಇಟ್ಟಿಲ್ಲ. S ಅನ್ನು R ಗಿಂತ ಕೆಳಗಿನ ಯಾವುದಾದರೂ ಒಂದು ಸ್ಥಳದಲ್ಲಿ, ಆದರೆ M ಗಿಂತ ಮೇಲಿನ ಯಾವುದಾದರೂ ಒಂದು ಸ್ಥಳದಲ್ಲಿ ಇಡಲಾಗಿದೆ. ಹಾಗಾದರೆ, M ಗಿಂತ ಮೇಲೆ ಮೂರನೇ ಸ್ಥಾನದಲ್ಲಿ ಯಾವ ಪೆಟ್ಟಿಗೆಯನ್ನು ಇಡಲಾಗಿದೆ?

Ans
- ✗ A. N
- ✗ B. O
- ✓ C. R
- ✗ D. P

Q.42 ಒಂದು ನಿರ್ದಿಷ್ಟ ತರ್ಕವನ್ನು ಅನುಸರಿಸಿ, 24 ಎಂಬುದು 96 ಕ್ಕೆ ಸಂಬಂಧಿಸಿದೆ. ಅದೇ ತರ್ಕವನ್ನು ಅನುಸರಿಸಿ, 28 ಎಂಬುದು 112 ಕ್ಕೆ ಸಂಬಂಧಿಸಿದೆ. ಹಾಗಾದರೆ ಅದೇ ತರ್ಕವನ್ನು ಅನುಸರಿಸಿದಾಗ, 36 ಎಂಬುದು ನೀಡಿರುವ ಆಯ್ಕೆಗಳಲ್ಲಿ ಯಾವುದಕ್ಕೆ ಸಂಬಂಧಿಸಿದೆ?

(ಸೂಚನೆ: ಸಂಖ್ಯೆಗಳನ್ನು ಅವುಗಳ ಬಿಡಿ ಅಂಕಿಗಳಾಗಿ ವಿಭಜಿಸದೆ, ಪೂರ್ಣ ಸಂಖ್ಯೆಗಳ ಮೇಲೆ ಕ್ರಿಯೆಗಳನ್ನು ನಡೆಸಬೇಕು. ಉದಾ. ಸಂಖ್ಯೆ 13 ಅನ್ನು 13 ಎಂದು ತೆಗೆದುಕೊಂಡು ಅದರ ಮೇಲೆ ಸಂಕಲನ/ವ್ಯವಕಲನ/ಗುಣಾಕಾರ ಮುಂತಾದ ಕ್ರಿಯೆಗಳನ್ನು ಮಾಡಬಹುದು. 13 ಅನ್ನು 1 ಮತ್ತು 3 ಆಗಿ ವಿಭಜಿಸಿ ನಂತರ 1 ಮತ್ತು 3 ರ ಮೇಲೆ ಬೇರೆ ಬೇರೆಯಾಗಿ ಗಣಿತದ ಕ್ರಿಯೆಗಳನ್ನು ಮಾಡುವಂತಿಲ್ಲ.)

Ans
- ✗ A. 132
- ✓ B. 144
- ✗ C. 156
- ✗ D. 168

Blackbook

Get India's No 1 Vocab Preparation App for FREE : Blackbook : English Vocabulary

GET IT ON Google Play

Q.43 ಈ ಪ್ರಶ್ನೆಯಲ್ಲಿ, ಒಂದು ಪ್ರಶ್ನೆಯ ನಂತರ (I) ಮತ್ತು (II) ಎಂದು ಗುರುತಿಸಲಾದ ಎರಡು ಹೇಳಿಕೆಗಳನ್ನು ನೀಡಲಾಗಿದೆ. ಈ ಹೇಳಿಕೆಗಳಲ್ಲಿ ನೀಡಲಾದ ಮಾಹಿತಿಯು ಈ ಪ್ರಶ್ನೆಗೆ ಉತ್ತರಿಸಲು ಸಾಕಾಗುತ್ತದೆಯೇ ಎಂಬುದನ್ನು ನೀವು ನಿರ್ಧರಿಸಬೇಕು. ಎರಡೂ ಹೇಳಿಕೆಗಳನ್ನು ಓದಿರಿ ಮತ್ತು ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಿ.

B, F, R, T ಮತ್ತು X ಎಂಬ 5 ಕಂಬಗಳಲ್ಲಿ, ಪ್ರತಿಯೊಂದೂ ವಿಭಿನ್ನ ಎತ್ತರವನ್ನು ಹೊಂದಿವೆ. ಯಾವ ಕಂಬವು ಅತ್ಯಂತ ಎತ್ತರವಾಗಿದೆ?

(I) B ಕಂಬವು T ಗಿಂತ ಎತ್ತರವಾಗಿದೆ, ಆದರೆ X ಗಿಂತ ಚಿಕ್ಕದಾಗಿದೆ. B ಕಂಬವು ಕೇವಲ ಒಂದು ಕಂಬಕ್ಕಿಂತ ಚಿಕ್ಕದಾಗಿದೆ.
(II) T ಕಂಬವು F ಗಿಂತ ಎತ್ತರವಾಗಿದೆ.

Ans
- ✗ A. ಹೇಳಿಕೆ II ರಲ್ಲಿನ ಮಾಹಿತಿಯು ಮಾತ್ರವೇ ಪ್ರಶ್ನೆಯನ್ನು ಉತ್ತರಿಸಲು ಸಾಕಾಗುತ್ತದೆ, ಆದರೆ ಹೇಳಿಕೆ I ರಲ್ಲಿನ ಮಾಹಿತಿಯು ಸಾಕಾಗುವುದಿಲ್ಲ.
- ✗ B. I ಮತ್ತು II ಎರಡೂ ಹೇಳಿಕೆಗಳಲ್ಲಿರುವ ಒಟ್ಟು ಮಾಹಿತಿಯು (ಹೇಳಿಕೆ I ಅಥವಾ ಹೇಳಿಕೆ II ಮಾತ್ರವೇ ಸಾಲುವುದಿಲ್ಲ) ಈ ಪ್ರಶ್ನೆಯನ್ನು ಉತ್ತರಿಸಲು ಸಾಕು.
- ✓ C. ಹೇಳಿಕೆ I ರಲ್ಲಿನ ಮಾಹಿತಿಯು ಮಾತ್ರವೇ ಪ್ರಶ್ನೆಯನ್ನು ಉತ್ತರಿಸಲು ಸಾಕಾಗುತ್ತದೆ, ಆದರೆ ಹೇಳಿಕೆ II ಯಲ್ಲಿನ ಮಾಹಿತಿಯು ಸಾಕಾಗುವುದಿಲ್ಲ.
- ✗ D. I ಮತ್ತು II ಎರಡೂ ಹೇಳಿಕೆಗಳಲ್ಲಿರುವ ಒಟ್ಟು ಮಾಹಿತಿಯು ಪ್ರಶ್ನೆಯನ್ನು ಉತ್ತರಿಸಲು **ಸಾಕಾಗುವುದಿಲ್ಲ.**

Q.44 ರಿಕ್ ಅವರು A ಬಿಂದುವಿನಿಂದ ನಡೆಯಲು ಪ್ರಾರಂಭಿಸುತ್ತಾರೆ ಮತ್ತು ದಕ್ಷಿಣಕ್ಕೆ 6 km ನಡೆಯುತ್ತಾರೆ. ನಂತರ ಅವರು ಎಡಕ್ಕೆ ತಿರುಗಿ 9 km ನಡೆಯುತ್ತಾರೆ, ಮತ್ತೆ ಎಡಕ್ಕೆ ತಿರುಗಿ 16 km ನಡೆಯುತ್ತಾರೆ. ನಂತರ ಎಡಕ್ಕೆ ತಿರುಗಿ 18 km ನಡೆಯುತ್ತಾರೆ. ಅವರು ಅಂತಿಮವಾಗಿ ಎಡಕ್ಕೆ ತಿರುಗಿ 10 km ನಡೆಯುತ್ತಾರೆ ಮತ್ತು P ಬಿಂದುವಿನಲ್ಲಿ ನಿಲ್ಲುತ್ತಾರೆ. ಹಾಗಾದರೆ ಅವರು ಮತ್ತೆ A ಬಿಂದುವನ್ನು ತಲುಪಲು ಎಷ್ಟು ದೂರ (ಅತ್ಯಂತ ಕಡಿಮೆ ದೂರ) ಮತ್ತು ಯಾವ ದಿಕ್ಕಿನಲ್ಲಿ ನಡೆಯಬೇಕು? (ನಿರ್ದಿಷ್ಟವಾಗಿ ಹೇಳಿರುವುದನ್ನು ಬಿಟ್ಟು ಉಳಿದೆಲ್ಲಾ ತಿರುವುಗಳು 90 ಡಿಗ್ರಿಯ ತಿರುವುಗಳಾಗಿವೆ.)

Ans
- ✗ A. 7 km ದಕ್ಷಿಣಕ್ಕೆ
- ✗ B. 8 km ಉತ್ತರಕ್ಕೆ
- ✓ C. 9 km ಪೂರ್ವಕ್ಕೆ
- ✗ D. 10 km ಪಶ್ಚಿಮಕ್ಕೆ

Q.45 ಇಂಗ್ಲಿಷ್ ವರ್ಣಮಾಲೆಯ ಅನುಕ್ರಮವನ್ನು ಆಧರಿಸಿ, ನೀಡಲಾದ ಸರಣಿಯಲ್ಲಿ (?) ಜಾಗದಲ್ಲಿ ಯಾವುದು ಸರಿಹೊಂದುತ್ತದೆ?

DEF, GHI, JKL, MNO, ?

Ans
- ✓ A. PQR
- ✗ B. NML
- ✗ C. QRS
- ✗ D. OPQ

Q.46 A, B, C, D, E, F, G ಎಂಬವರು ಉತ್ತರಕ್ಕೆ ಮುಖ ಮಾಡಿ ಒಂದು ಸಾಲಿನಲ್ಲಿ ಕುಳಿತಿದ್ದಾರೆ. E ಅವರು ಸಾಲಿನ ಎಡ ತುತ್ತ ತುದಿಯಲ್ಲಿ ಕುಳಿತಿದ್ದಾರೆ. A ಮತ್ತು C ನಡುವೆ ಕೇವಲ ಎರಡು ಜನರು ಕುಳಿತಿದ್ದಾರೆ. C ಅವರು F ಮತ್ತು D ನಡುವೆ ಕುಳಿತಿದ್ದಾರೆ. B ಅವರು E ಮತ್ತು F ನಡುವೆ ಕುಳಿತಿದ್ದಾರೆ. G ಅವರು A ಯ ತಕ್ಷಣದ ಎಡಕ್ಕೆ ಕುಳಿತಿದ್ದಾರೆ. ಹಾಗಾದರೆ ಸಾಲಿನ ಬಲ ತುತ್ತ ತುದಿಯಲ್ಲಿ ಯಾರು ಕುಳಿತಿದ್ದಾರೆ?

Ans
- ✗ A. E
- ✗ B. D
- ✓ C. A
- ✗ D. C

Q.47 ಕೆಳಗೆ ನೀಡಲಾದ ಎರಡು ಜೋಡಿಗಳು ಯಾವ ಮಾದರಿಯನ್ನು ಅನುಸರಿಸುತ್ತವೆಯೋ ಅದೇ ಮಾದರಿಯನ್ನು ಅನುಸರಿಸುವ ಜೋಡಿಯನ್ನು ಆಯ್ಕೆ ಮಾಡಿ. ಈ ಎರಡೂ ಜೋಡಿಗಳು ಒಂದೇ ಮಾದರಿಯನ್ನು ಅನುಸರಿಸುತ್ತವೆ.

STV–XYA
QRT–VWY

Ans
- ✗ A. FFG–KLN
- ✗ B. FFG–JKM
- ✓ C. FGI–KLN
- ✗ D. FGI–JLM

Blackbook

Get India's No 1 Vocab Preparation App for FREE : Blackbook : English Vocabulary GET IT ON Google Play

**Q.48** **ಅನಿತಾ ಅವರು ಸುರೇಶ್ ಅವರ ಹೆಂಡತಿ. ಸುರೇಶ್ ಅವರು ಮಹೇಶ್ ಅವರ ಸಹೋದರ. ಮಹೇಶ್ ಅವರು ಹರೀಶ್ ಅವರ ಮಗ. ಹರೀಶ್ ಅವರು ಕಾವ್ಯಾ ಅವರ ತಂದೆ. ಹಾಗಾದರೆ, ಅನಿತಾ ಅವರು ಕಾವ್ಯಾ ಅವರಿಗೆ ಹೇಗೆ ಸಂಬಂಧಿ?**

**Ans**
- ✗ A. ಸಹೋದರನ ಮಗಳು
- ✗ B. ಮಗಳು
- ✗ C. ಹೆಂಡತಿ
- ✓ D. ಸಹೋದರನ ಹೆಂಡತಿ

**Q.49** **ಈ ಕೆಳಗಿನ ಸರಣಿಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ (?) ಜಾಗಕ್ಕೆ ಯಾವುದು ಸರಿ ಹೊಂದುತ್ತದೆ?**

**11 13 20 22 29 31 ?**

**Ans**
- ✓ A. 38
- ✗ B. 33
- ✗ C. 37
- ✗ D. 35

**Q.50** **ಈ ಕೆಳಗೆ ನೀಡಲಾದ ಸಂಕೇತಗಳು ಮತ್ತು ಅವುಗಳ ನಂತರದ ಷರತ್ತುಗಳ ಪ್ರಕಾರ ಅಕ್ಷರ ಸಂಕೇತಗಳನ್ನು ಬಳಸಿಕೊಂಡು ಸಂಖ್ಯೆಗಳು/ಚಿಹ್ನೆಗಳ ಗುಂಪನ್ನು ಸಂಕೇತಿಸಲಾಗುತ್ತದೆ. ಈ ಷರತ್ತುಗಳನ್ನು ಅನುಸರಿಸುವ ಸಂಕೇತಗಳ ಸರಿಯಾದ ಸಂಯೋಜನೆಯೇ ನಿಮ್ಮ ಉತ್ತರವಾಗಿದೆ.**
**ಸೂಚನೆ: ಒಂದುವೇಳೆ ಯಾವುದೇ ಷರತ್ತುಗಳು ಅನ್ವಯಿಸದಿದ್ದರೆ, ಕೋಷ್ಟಕದಲ್ಲಿ ನೀಡಲಾದಂತೆ ಆಯಾ ಸಂಖ್ಯೆ/ಚಿಹ್ನೆಯ ಸಂಕೇತಗಳನ್ನೇ ನೇರವಾಗಿ ಅನುಸರಿಸಬೇಕು.**

| ಸಂಖ್ಯೆ / ಚಿಹ್ನೆ | 2 | @ | 8 | # | 5 | % | 1 | & | 7 | $ | 4 | + | 9 | 6 |
|---|---|---|---|---|---|---|---|---|---|---|---|---|---|---|
| ಸಂಕೇತ | B | M | U | R | K | T | H | F | P | D | A | L | W | Q |

**ಷರತ್ತುಗಳು –**
**(i) ಮೊದಲ ಧಾತುವು ಚಿಹ್ನೆಯಾಗಿದ್ದರೆ, ಮೂರನೇ ಧಾತುವನ್ನು © ಎಂದು ಸಂಕೇತಿಸಿ.**
**(ii) ಎರಡನೇ ಧಾತುವು ಚಿಹ್ನೆಯಾಗಿದ್ದರೆ, ಐದನೇ ಧಾತುವನ್ನು © ಎಂದು ಸಂಕೇತಿಸಿ.**
**(iii) ನಾಲ್ಕನೇ ಧಾತುವು ಚಿಹ್ನೆಯಾಗಿದ್ದರೆ, ಮೊದಲ ಧಾತುವನ್ನು © ಎಂದು ಸಂಕೇತಿಸಿ.**

**ಈ ಕೆಳಗಿನ ಸಂಖ್ಯಾ-ಚಿಹ್ನೆಗಳ ಗುಂಪಿನ ಸಂಕೇತ ಏನು?**
**4@951**

**Ans**
- ✗ A. ©MWKH
- ✓ B. AMWK©
- ✗ C. AM©KH
- ✗ D. AMWKH

Section : **General Science**

**Q.51** **ಹೈಪರ್‌ಮೆಟ್ರೋಪಿಯಾ (ದೂರದೃಷ್ಟಿ) ಹೊಂದಿರುವ ಒಬ್ಬ ವ್ಯಕ್ತಿಗೆ ಅವರ ದೃಷ್ಟಿಯನ್ನು ಸರಿಪಡಿಸಲು ಮಸೂರವನ್ನು ಸೂಚಿಸಲಾಗುತ್ತದೆ. ಅವರ ಕನ್ನಡಕದಲ್ಲಿ ಯಾವ ಪ್ರಕಾರದ ಮಸೂರ ಮತ್ತು ಕ್ರಿಯೆಯನ್ನು ಬಳಸಲಾಗುತ್ತದೆ?**

**Ans**
- ✗ A. ಪೀನ ಮಸೂರ; ವಿಕೇಂದ್ರೀಕರಿಸುವ ಕ್ರಿಯೆ
- ✗ B. ನಿಮ್ನ ಮಸೂರ; ಕೇಂದ್ರೀಕರಿಸುವ ಕ್ರಿಯೆ
- ✓ C. ಪೀನ ಮಸೂರ; ಕೇಂದ್ರೀಕರಿಸುವ ಕ್ರಿಯೆ
- ✗ D. ನಿಮ್ನ ಮಸೂರ; ವಿಕೇಂದ್ರೀಕರಿಸುವ ಕ್ರಿಯೆ

**Q.52** **ಈ ಕೆಳಗಿನವುಗಳಲ್ಲಿ ಯಾವುದು ಮಾಲ್‌ಗಳಲ್ಲಿ ಭದ್ರತಾ ದರ್ಪಣವಾಗಿ ಪೀನ ದರ್ಪಣವನ್ನು ಬಳಸಲು ಸರಿಯಾದ ಕಾರಣವಾಗಿದೆ?**

**Ans**
- ✗ A. ಅದು ತನ್ನ ಮೇಲೆ ಬೀಳುವ ಬೆಳಕನ್ನು ಒಮ್ಮುಖಗೊಳಿಸುತ್ತದೆ
- ✓ B. ಅದು ನೇರ ಮತ್ತು ಕುಗ್ಗಿದ ಬಿಂಬವನ್ನು ರೂಪಿಸುತ್ತದೆ
- ✗ C. ಅದು ನೈಜ ಮತ್ತು ದೊಡ್ಡದಾದ ಬಿಂಬವನ್ನು ರೂಪಿಸುತ್ತದೆ
- ✗ D. ಅದು ತಲೆಕೆಳಗಾದ ಬಿಂಬವನ್ನು ರೂಪಿಸುತ್ತದೆ

Get India's No 1 Vocab Preparation App for FREE : **Blackbook : English Vocabulary**
GET IT ON Google Play

**Q.53** ಘರ್ಷಣೆರಹಿತ ಮೇಲ್ಮೈಯಲ್ಲಿ ಒಂದು ಬ್ಲಾಕ್ ನಿಶ್ಚಲ ಸ್ಥಿತಿಯಲ್ಲಿದೆ. ಒಂದು ನಿರ್ದಿಷ್ಟ ಅವಧಿಗೆ ಸ್ಥಿರ ಬಲವನ್ನು ಪ್ರಯೋಗಿಸಿದಾಗ, ಬ್ಲಾಕ್ ಅಂತಿಮ ವೇಗದೊಂದಿಗೆ ಚಲಿಸುತ್ತದೆ. ನ್ಯೂಟನ್ ನಿಯಮಗಳಿಂದ ಬ್ಲಾಕ್‌ನ ಚಲನೆಯ ಬಗ್ಗೆ ಯಾವ ತೀರ್ಮಾನವನ್ನು ಸಮರ್ಥಿಸಲಾಗುತ್ತದೆ?

Ans
- ✗ A. ಬಲವು ಬ್ಲಾಕ್‌ನ ದಿಕ್ಕನ್ನು ಮಾತ್ರ ಬದಲಾಯಿಸುತ್ತದೆ ಆದರೆ ಅದರ ವೇಗವನ್ನಲ್ಲ
- ✗ B. ಬಲವನ್ನು ಪರಿಗಣಿಸದೇ ಬ್ಲಾಕ್‌ನ ವೇಗವು ಬದಲಾಗದೆ ಹಾಗೆಯೇ ಉಳಿಯುತ್ತದೆ
- ✓ C. ಬಲವನ್ನು ಪ್ರಯೋಗಿಸಿದಷ್ಟು ಬ್ಲಾಕ್‌ನ ವೇಗವು ಏಕರೂಪವಾಗಿ ಹೆಚ್ಚಾಗುತ್ತದೆ
- ✗ D. ಬಲ ಪ್ರಯೋಗದ ಸಮಯದಲ್ಲಿ ಬ್ಲಾಕ್‌ನ ವೇಗವು ಯಾದೃಚ್ಛಿಕವಾಗಿ ಏರಿಳಿತಗೊಳ್ಳುತ್ತದೆ

**Q.54** ಎರಡು ವಸ್ತುಗಳು ವೇಗ-ಕಾಲ ನಕ್ಷೆಗಳನ್ನು ಹೊಂದಿದ್ದು, ಎರಡೂ ಸರಳ ರೇಖೆಗಳು ಕಾಲ ಅಕ್ಷಕ್ಕೆ ಸಮಾನಾಂತರವಾಗಿವೆ, ಆದರೆ ವಿಭಿನ್ನ ಎತ್ತರಗಳಲ್ಲಿವೆ. ಇದು ಎರಡು ವಸ್ತುಗಳ ಬಗ್ಗೆ ಏನನ್ನು ಸೂಚಿಸುತ್ತದೆ?

Ans
- ✗ A. ಎರಡೂ ಒಂದೇ ದರದಲ್ಲಿ ವೇಗೋತ್ಕರ್ಷಗೊಳ್ಳುತ್ತಿವೆ
- ✓ B. ಎರಡೂ ಏಕರೂಪದ ವೇಗಗಳನ್ನು ಹೊಂದಿವೆ, ಆದರೆ ವಿಭಿನ್ನ ಪರಿಮಾಣಗಳನ್ನು ಹೊಂದಿವೆ
- ✗ C. ಎರಡೂ ಒಂದೇ ವೇಗದಲ್ಲಿ ಚಲಿಸುತ್ತಿವೆ
- ✗ D. ಮಧ್ಯಂತರದ ಉದ್ದಕ್ಕೂ ಎರಡೂ ನಿಶ್ಚಲ ಸ್ಥಿತಿಯಲ್ಲಿವೆ

**Q.55** ರಕ್ತ ಮತ್ತು ಸುತ್ತಮುತ್ತಲಿನ ಅಂಗಾಂಶ ಕೋಶಗಳ ನಡುವೆ ವಸ್ತುಗಳ ವಿನಿಮಯಕ್ಕೆ ಅನುವು ಮಾಡಿಕೊಡುವ ಅತ್ಯಂತ ತೆಳುವಾದ ಭಿತ್ತಿಗಳನ್ನು ಹೊಂದಿರುವ ರಕ್ತನಾಳಗಳು ಯಾವುವು?

Ans
- ✗ A. ಅಭಿಧಮನಿಗಳು (Veins)
- ✗ B. ಅಪಧಮನಿಗಳು (Arteries)
- ✓ C. ಲೋಮನಾಳಗಳು (Capillaries)
- ✗ D. ಮಹಾಭಿಧಮನಿ (Vena cava)

**Q.56** ಒಂದು ಜೀವಿಯನ್ನು ಸಾಮ್ರಾಜ್ಯಕ್ಕೆ ವರ್ಗೀಕರಿಸಿದ ನಂತರ, ಶ್ರೇಣೀಕೃತ ವರ್ಗೀಕರಣ ವ್ಯವಸ್ಥೆಯಲ್ಲಿ ಬರುವ ಮುಂದಿನ ಜೀವಿ ವರ್ಗೀಕರಣ ಹಂತ ಯಾವುದು?

Ans
- ✗ A. ಇತರ ವರ್ಗಗಳನ್ನು ಪರಿಗಣಿಸುವ ಮೊದಲು ಜಾತಿಯನ್ನು ಗುರುತಿಸುವುದು
- ✗ B. ಅದು ಯಾವ ಕುಟುಂಬಕ್ಕೆ ಸೇರಿದೆ ಎಂಬುದನ್ನು ಸರಿಯಾಗಿ ನಿರ್ಧರಿಸುವುದು
- ✗ C. ನಿರ್ದಿಷ್ಟ ಗುಣಲಕ್ಷಣಗಳನ್ನು ಬಳಸಿ ಜೀವಿಗಳನ್ನು ನೇರವಾಗಿ ಒಂದು ವರ್ಗಕ್ಕೆ ಸೇರಿಸುವುದು
- ✓ D. ವಿಶಾಲವಾದ ಸಾಮಾನ್ಯ ಗುಣಲಕ್ಷಣಗಳ ಆಧಾರದ ಮೇಲೆ ಜೀವಿಯನ್ನು ವಂಶಕ್ಕೆ ನಿಯೋಜಿಸುವುದು

**Q.57** ಎಲ್ಲಾ ಸಾವಯವ ಸಂಯುಕ್ತಗಳಲ್ಲಿ ಇರುವ ಸಮಾನ ಗುಣಲಕ್ಷಣವನ್ನು ಈ ಕೆಳಗಿನ ಯಾವ ಹೇಳಿಕೆಯು ಉತ್ತಮವಾಗಿ ವಿವರಿಸುತ್ತದೆ?

Ans
- ✗ A. ಅವು ಕೊಠಡಿ ತಾಪಮಾನದಲ್ಲಿ ಅನಿಲಗಳಾಗಿ ಮಾತ್ರ ಅಸ್ತಿತ್ವದಲ್ಲಿ ಇರುತ್ತವೆ
- ✓ B. ಅವು ಇತರ ಧಾತುಗಳಿಗೆ ಬಂಧಿಸಲ್ಪಟ್ಟ ಇಂಗಾಲದ ಪರಮಾಣುಗಳನ್ನು ಹೊಂದಿರುತ್ತವೆ
- ✗ C. ಅವು ಯಾವಾಗಲೂ ನೀರಿನಲ್ಲಿ ಕರಗುತ್ತವೆ
- ✗ D. ಅವೆಲ್ಲವೂ ಸಾರಜನಕದ ಪರಮಾಣುಗಳನ್ನು ಹೊಂದಿರುತ್ತವೆ

**Q.58** ಒಂದು ಪ್ರಯೋಗಾಲಯದಲ್ಲಿ ಎಥೆನಾಲ್ ಮತ್ತು ನೀರಿನ ಮಿಶ್ರಣವನ್ನು ಬೇರ್ಪಡಿಸಲು ಯಾವ ವಿಧಾನವು ಹೆಚ್ಚು ಸೂಕ್ತವಾಗಿದೆ?

Ans
- ✓ A. ಸಾಮಾನ್ಯ ಬಟ್ಟಿ ಇಳಿಸುವಿಕೆ
- ✗ B. ಆವೀಕರಣ
- ✗ C. ವರ್ಣರೇಖನ
- ✗ D. ಸೋಸುವಿಕೆ

**Q.59** ಒಂದು ರೈಲು 30 km/h ವೇಗದಲ್ಲಿ 60 km ಚಲಿಸುತ್ತದೆ, 1 ಗಂಟೆ ನಿಲ್ಲುತ್ತದೆ ಮತ್ತು ನಂತರ 45 km/h ವೇಗದಲ್ಲಿ 90 km ಕ್ರಮಿಸುತ್ತದೆ. ಇಡೀ ಪ್ರಯಾಣದ ಸರಾಸರಿ ಜವ ಎಷ್ಟು?

Ans
- ✗ A. 40 km/h
- ✗ B. 20 km/h
- ✗ C. 50 km/h
- ✓ D. 30 km/h

Blackbook

Get India's No 1 Vocab Preparation App for FREE : **Blackbook : English Vocabulary**

